ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

Swabhimani Sahakari

Volume - 12
Issue - 8
Pages - 20
₹ - 12
August - 2014



ಶ್ರಾವಣಾ ಬಂತು ಕಾಡಿಗೆ । ಬಂತು ನಾಡಿಗೆ ।
ಬಂತು ಬೀಡಿಗೆ । ಶ್ರಾವಣಾ ಬಂತು ॥

ಶ್ರಾವಣಾ ಬಂತು ಘಟ್ಟಕ್ಕ । ರಾಜ್ಯ ಪಟ್ಟಕ್ಕ ।
ಬಾನು ಮಟ್ಟಕ್ಕ ।
ಏರ್ಯಾವ ಮುಗಿಲು । ರವಿ ಕಾಣೆ ಹಾಡೆಹಗಲು ।

– ದ.ರಾ. ಬೇಂದ್ರೆ







ಶ್ರೀ ವರಮಹಾಲಕ್ಷ್ಮಿ, 68ನೇ ಸ್ವಾತಂತ್ರ್ಯೋತ್ಸವ, ಶ್ರೀ ಗೌರಿ ಗಣೇಶ

**ಶುಭಾಶಯಗಳು**

ಸೌಹಾರ್ದ ಸಹಕಾರಿಗಳ ಸಂಖ್ಯೆ : 2915 । 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 636

# ವಾರ್ಷಿಕ ಸಾಮಾನ್ಯ ಸಭೆ- ಚರ್ಚೆಗಳು, ಚಿಂತನೆಗಳು ಸಹಕಾರಿಯ ಅಭಿವೃದ್ಧಿಗೆ ಒತ್ತು ನೀಡುವಂತಿರಲಿ



ಆತ್ಮೀಯ ಸಹಕಾರಿ ಬಂಧುಗಳೇ...

ರಾಜ್ಯದ ಸಮಸ್ತ ಸಹಕಾರಿ ಬಂಧುಗಳಿಗೆ 68ನೇ ಸ್ವಾತಂತ್ರ್ಯೋತ್ಸವ, ಶ್ರೀ ವರಮಹಾಲಕ್ಷ್ಮೀ ಹಾಗೂ ಗೌರಿ ಗಣೇಶ ಹಬ್ಬಗಳ ಶುಭಾಶಯಗಳು. ಎಲ್ಲಾ ಸಹಕಾರಿಗಳಿಗೆ ವರಮಹಾಲಕ್ಷ್ಮೀ ಹಾಗೂ ಗೌರಿ ಗಣೇಶ ದೇವಾನುದೇವತೆಗಳು ನಿಮಗೆ ನವಚೈತನ್ಯವನ್ನು ಹಾಗೂ ನಿಮ್ಮ ಬಾಳಿನಲ್ಲಿ ಸುಃಖ ಶಾಂತಿ ನೆಮ್ಮದಿಯನ್ನು ನೀಡಲೆಂದು ಪ್ರಾರ್ಥಿಸುತ್ತೇನೆ.

ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಹೇಳಿದಂತೆ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ 25 ಸೆಪ್ಟೆಂಬರ್ ಒಳಗಾಗಿ ವಾರ್ಷಿಕ ಸಾಮಾನ್ಯ ಸಭೆಗಳು ಕಡ್ಡಾಯವಾಗಿ ನಡೆಯಲೇಬೇಕು. ಸಹಕಾರಿಗಳ ಸದಸ್ಯರಿಗೆ ತಮ್ಮ ಸಹಕಾರಿಯ ಪ್ರಗತಿಯನ್ನು ಪರಿಶೀಲಿಸುವ, ಎಲ್ಲಾ ಸದಸ್ಯರೊಡನೆ ಬೆರೆಯುವ, ಸಹಕಾರಿಯ ಕಳೆದ ಸಾಲಿನ ಆಡಳಿತ ವರದಿ, ಲೆಕ್ಕಪರಿಶೋಧನಾ ವರದಿ, ಮುಂಬರುವ ವರ್ಷಗಳ ಕ್ರಿಯಾ ಯೋಜನೆ, ಆಯ-ವ್ಯಯ ಮುಂತಾದ ಮಹತ್ವದ ವಿಷಯಗಳ ಚರ್ಚೆಗಳಲ್ಲಿ ಭಾಗವಹಿಸುವ ಹಾಗೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸದವಕಾಶ.

ಈ ಅವಕಾಶಗಳಿಂದ ಯಾವ ಸದಸ್ಯರೂ ವಂಚಿತರಾಗದಂತೆ ನೋಡಿಕೊಳ್ಳುವುದು ಪ್ರತಿಯೊಂದು ಸಹಕಾರಿಯ, ಆಡಳಿತ ಮಂಡಳಿಯ ಪ್ರಥಮ ಕರ್ತವ್ಯ. ಹಾಗೆಯೇ ಸದಸ್ಯರು ಸಹ ಸಕ್ರಿಯವಾಗಿ ಭಾಗವಹಿಸುವುದು ಅಗತ್ಯ. ಅರಿತ ಸದಸ್ಯ ಹಾಗೂ ನುರಿತ ಆಡಳಿತ ಮಂಡಳಿ ಸಹಕಾರಿಯ ಅಭಿವೃದ್ಧಿಯ ತಳಹದಿಯಾಗುತ್ತಾರೆ.

ಸಹಕಾರಿಯ ಸಾಮಾನ್ಯ ಸಭೆಗಳಲ್ಲಿ ಭಾಗವಹಿಸುವ ಸದಸ್ಯರು ಎಲ್ಲಾ ಜಾತಿ, ಮತ, ಪಕ್ಷಗಳ ಭೇದಗಳ ಪ್ರಭಾವ ಮತ್ತು ಒತ್ತಾಸೆಗಳನ್ನು ಬದಿಗಿಟ್ಟು ಭಾಗವಹಿಸುವುದು ಅಗತ್ಯ. ಏಕೆಂದರೆ ಸಹಕಾರ ಸಂಸ್ಥೆಗಳು ಆರ್ಥಿಕ ಸಂಘಟನೆಗಳಾಗಿ ಸಮಗ್ರ ಸಮಾಜದ ಅಭಿವೃದ್ಧಿಯ ಗುರಿ ಹೊಂದಿರುವುದರಿಂದ ಇಲ್ಲಿ ಅಂತಹ ಭಾವನೆಗಳಿಗೆ ಆವೇಶಗಳಿಗೆ ಅವಕಾಶವಿರಬಾರದು. ವೈಯಕ್ತಿಕ ಗುರಿಸಾಧನೆಗಿಂತಲೂ ಸಾಮೂಹಿಕ ಅಭಿವೃದ್ಧಿಯ ಗುರಿ ಇಲ್ಲಿ ಮುಖ್ಯವಾಗಿರುತ್ತದೆ.

ಸಾಮಾನ್ಯ ಸಭೆಯ ವಿಷಯಪಟ್ಟಿಯಂತೆ ನಿಗದಿತ ಸಮಯಕ್ಕೆ ಸಭೆ ಪ್ರಾರಂಭವಾಗಬೇಕು. ಪ್ರತಿ ವಿಷಯದ ಚರ್ಚೆಗಳಲ್ಲಿ ಎಲ್ಲರ ಆಸಕ್ತಿ ಇರಬೇಕೆ ವಿನಃ ಗುಂಪುಗಾರಿಕೆಯಿಂದ ಕೂಡಿರಬಾರದು. ರಾಜಕೀಯ ಬೆರೆಸಬಾರದು. ರಾಜಕೀಯ ಬೆರೆಸಿದ ಅನೇಕ ಸಂಸ್ಥೆಗಳ ಅಭಿವೃದ್ಧಿ ಕುಂಠಿತವಾಗಿರುವುದನ್ನು, ಸಂಸ್ಥೆಗಳು ನೆಲಕಚ್ಚಿರುವುದನ್ನು ನಾವು ನೋಡಿದ್ದೇವೆ. ಇನ್ನೊಬ್ಬರ ಸಮಯ ತೆಗೆದುಕೊಳ್ಳುವ ಹಕ್ಕು ನಮಗಿಲ್ಲ. ಹೀಗಾಗಿ ಪ್ರತಿಯೊಂದು ಚರ್ಚೆ, ಹಾಗೂ ಚಿಂತನೆಯು ಅಭಿವೃದ್ಧಿಯ ಪರವಾಗಿರಲಿ ಎಂಬುದು ಸಹಕಾರಿಗಳ ಹಾಗೂ ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ.

> ಯಾವ ಸದಸ್ಯರೂ ವಂಚಿತರಾಗದಂತೆ ನೋಡಿಕೊಳ್ಳುವುದು ಪ್ರತಿಯೊಂದು ಸಹಕಾರಿಯ, ಆಡಳಿತ ಮಂಡಳಿಯ ಪ್ರಥಮ ಕರ್ತವ್ಯ. ಹಾಗೆಯೇ ಸದಸ್ಯರು ಸಹ ಸಕ್ರಿಯವಾಗಿ ಭಾಗವಹಿಸುವುದು ಅಗತ್ಯ. ಅರಿತ ಸದಸ್ಯ ಹಾಗೂ ನುರಿತ ಆಡಳಿತ ಮಂಡಳಿ ಸಹಕಾರಿಯ ಅಭಿವೃದ್ಧಿಯ ತಳಹದಿಯಾಗುತ್ತಾರೆ.

**ಗುರುನಾಥ ಜಾಂತಿಕರ,** ಅಧ್ಯಕ್ಷರು

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಗುರುನಾಥ ಜಾಂತಿಕರ**
ಗೌರವ ಅಧ್ಯಕ್ಷರು

**ಶ್ರೀ ಹೆಚ್.ವಿ.ರಾಜೀವ**
ಗೌರವ ಉಪಾಧ್ಯಕ್ಷರು

**ಶ್ರೀ ಎಸ್.ಆರ್.ಸತೀಶಚಂದ್ರ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು

## ಒ ಳ ಪು ಟ ಗ ಳ ಲ್ಲಿ . . .

ಸಂಯುಕ್ತ ಸಹಕಾರಿಯ 13ನೇ ವಾರ್ಷಿಕ ಸಾಮಾನ್ಯ ಸಭೆ................4
ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಪ್ರೋತ್ಸಾಹ – ಎಚ್.ಕೆ.ಪಾಟೀಲ್ ....... 5
ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆ ಕುರಿತ ತರಬೇತಿ ಕಾರ್ಯಕ್ರಮ ........ 6
ದಿ ಪಾವಗಡ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿಯ ನಿರ್ದೇಶಕರು ಹಾಗೂ ಶಾಖಾ ಉಸ್ತುವಾರಿ ಸದಸ್ಯರಿಗಾಗಿ 2 ದಿನಗಳ ತರಬೇತಿ ... 7
ಉದ್ಯೋಗ ಅನ್ವೇಷಣೆ ಬದಲಿಗೆ ಉದ್ಯೋಗ ಸೃಷ್ಟಿಗೆ ಯುವಕರು ಮುಂದಾಗಬೇಕು – ಶ್ರೀ ಎಚ್.ವಿ.ರಾಜೀವ ........ 8
ಯುವ ಸಹಕಾರಿ ಪಡೆ ನಿರ್ಮಾಣ ಕಾರ್ಯದಲ್ಲಿ (ಕ್ಯಾಂಪಸ್ಸ್ ಕೋ-ಆಪರೇಟಿವ್ಸ್) ವಿದ್ಯಾರ್ಥಿ ಸೌಹಾರ್ದ ಸಹಕಾರ ಸಂಸ್ಥೆಗಳ ಪಾತ್ರ ಮಹತ್ವದ್ದು – ಪ್ರೊ. ಯಶವಂತ ಡೋಗ್ರೆ ........ 9
ಸದಸ್ಯರಿಗೆ ಸಹಕಾರಿಯ ಕಾರ್ಯಚಟುವಟಿಕೆಗಳ ಮಾಹಿತಿ ಅಗತ್ಯ – ಹೆಚ್.ವಿ.ರಾಜೀವ ........ 10
ಸಹಕಾರ ಕ್ಷೇತ್ರದಿಂದ ಸಾಮಾನ್ಯ ವ್ಯಕ್ತಿಯೂ ಸಹ ಪ್ರಯೋಜನ ಪಡೆಯಲು ಸಾಧ್ಯ : ಶ್ರೀ ಗುರುನಾಥ ಜಾಂತಿಕರ ........ 11
ಗುಲಬರ್ಗಾದಲ್ಲಿ ಸಿರಿ ಸಮೃದ್ಧಿ ಸೌಹಾರ್ದ ಸಹಕಾರಿ ನಿ., ಉದ್ಘಾಟನೆ ........ 12
ವಿವಿಧ ಸಹಕಾರಿಗಳಲ್ಲಿ ಇ-ಸ್ಟಾಂಪಿಂಗ್ ಸೇವೆ ಉದ್ಘಾಟನೆ........ 13
ಗುಲಬರ್ಗಾ ನಗರದ ಸೌಹಾರ್ದ ಸಹಕಾರಿಗಳಿಗೆ ಭೇಟಿ ........ 14
ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಮಾಜದ ಕನಿಷ್ಟ ವ್ಯಕ್ತಿಯ ಸೇವೆಯ ಅವಕಾಶ ಶ್ರೀಮತಿ ದೀಪಾ ಜಾರ್ಜ್ ........ 16
ತರಬೇತಿ ಗುಣಮಟ್ಟದ್ದಾಗಿತ್ತು – ಶ್ರೀ ಮನೋಹರ ಮಸ್ಕಿ ........ 17
ಸಹಕಾರಿ ಸಂಸ್ಥೆಗಳಲ್ಲಿ ವೃತ್ತಿಪರತೆಯ ವ್ಯವಹಾರ ಮಾನವ ಸಂಪನ್ಮೂಲ ಹಾಗೂ ಗ್ರಾಹಕರ ಸಂಬಂಧ ನಿರ್ವಹಣೆಯ ಪಾತ್ರ ಮತ್ತು ಮಹತ್ವ .. 18
ಸಹಕಾರಿ ಸಂಘಟನೆಗಳಲ್ಲಿ ಪರಿಣಾಮಕಾರಿ ನಾಯಕತ್ವ ........ 19

# ಸಂಪಾದಕೀಯ

## ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ

2012ರಲ್ಲಿ 97ನೇ ಸಂವಿಧಾನ ತಿದ್ದುಪಡಿಗನುಗುಣವಾಗಿ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಗೆ 2013ರಲ್ಲಿ ತಿದ್ದುಪಡಿಯನ್ನು ತರಲಾಯಿತು. ಈ ಸಂದರ್ಭದಲ್ಲಿ ಕೆಲವು ತಾರತಮ್ಯಗಳು ಹಾಗೂ ತಪ್ಪುಗಳು ಆಗಿ ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆಯಲ್ಲಿ ಕೆಲವು ಆಡಳಿತಾತ್ಮಕ ತೊಂದರೆಗಳು ಉದ್ಭವವಾಗಿರುವುದನ್ನು ಅನೇಕ ಸಂದರ್ಭಗಳಲ್ಲಿ ಮಾನ್ಯ ಸಹಕಾರ ಸಚಿವರ ಹಾಗೂ ರಾಜ್ಯ ಸರಕಾರದ ಸಹಕಾರ ಇಲಾಖೆಯ ಗಮನಕ್ಕೆ ತರಲಾಗಿತ್ತು. ಸೌಹಾರ್ದ ಸಹಕಾರಿಗಳ ನಿಯೋಗವೊಂದು ಮಾನ್ಯ ಸಹಕಾರಿ ಸಚಿವರಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿಗಳ ಜೊತೆಗೆ ತನ್ನ ಕೆಲವು ಕುಂದುಕೊರತೆಗಳನ್ನು ನಿವೇದಿಸಿಕೊಳ್ಳಲಾಗಿತ್ತು.

ದಿನಾಂಕ : 28/7/2014ರಂದು ಕರ್ನಾಟಕ ವಿಧಾನಮಂಡಳದ ಎರಡೂ ಸದನಗಳಲ್ಲಿ ತಿದ್ದುಪಡಿ ವಿಧೇಯಕ ಮಂಡನೆಯಾಗಿದೆ. ಒಮ್ಮತದಿಂದ ಈ ತಿದ್ದುಪಡಿ ವಿಧೇಯಕವನ್ನು ಅನುಮೋದಿಸಲಾಗಿರುವುದಕ್ಕೆ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಮಾನ್ಯ ಸಹಕಾರ ಸಚಿವರಿಗೆ ವಿಧಾನ ಸಭಾ ಸದಸ್ಯರುಗಳಿಗೆ ಹಾಗೂ ವಿಧಾನ ಪರಿಷತ ಸದಸ್ಯರುಗಳಿಗೆ ಮತ್ತು ಈ ವಿಧೇಯಕ ಸಿದ್ಧಪಡಿಸಿ ಅನುಮೋದನೆ ಪಡೆಯುವಲ್ಲಿ ಶ್ರಮಿಸಿದ ಸಹಕಾರ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಸಂಯುಕ್ತ ಸಹಕಾರಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಅನುಮೋದನೆಯಾಗಿರುವ ತಿದ್ದುಪಡಿಗಳ ಪ್ರಕಾರ ಮತ್ತು ತಿದ್ದುಪಡಿಗೆ ಉದ್ದೇಶಗಳು ಮತ್ತು ಕಾರಣಗಳ ಪ್ರಕಾರ ತಾಂತ್ರಿಕ ಕಾರಣಗಳ ಮೇಲೆ ಉಪವಿಧಿಗಳನ್ನು ತಿರಸ್ಕರಿಸುವುದು, ಉಪವಿಧಿಗಳ ತಿದ್ದುಪಡಿಗಳಿಗಾಗಿ ಶುಲ್ಕವನ್ನು ನಿಗದಿಪಡಿಸುವುದು, ದ್ವಿಸದಸ್ಯತ್ವವನ್ನು ತಪ್ಪಿಸುವುದು, ಸದಸ್ಯತ್ವವನ್ನು ತಿರಸ್ಕರಿಸಿದ್ದ ಸಂದರ್ಭದಲ್ಲಿ ಅಪೀಲಿಗಾಗಿ ಉಪಬಂಧಗಳು ಮತದಾನದ ಹಕ್ಕನ್ನು ಧೃಡೀಕರಿಸುವುದು ಸದಸ್ಯೇತರರಿಂದ ಠೇವಣಿಗಳ ಸಂಗ್ರಹದ ಮೇಲೆ ನಿರ್ಬಂಧಗಳು ಮತ್ತು ಇತರ ಪ್ರಾಸಂಗೀಕ ಮತ್ತು ಅನುಷಂಗೀಕ ತಿದ್ದುಪಡಿಗಳು ಸೇರಿವೆ. ಅವುಗಳಲ್ಲಿ ಸೌಹಾರ್ದ ಸಹಕಾರಿಗಳಿಗೆ ಅತ್ಯಂತ ಮಹತ್ವದ್ದಾಗಿದ್ದ ಸಹಕಾರಿಗಳಲ್ಲಿ ಸಹಸದಸ್ಯತ್ವವನ್ನು ಅರ್ಹಸದಸ್ಯರ ಶೇ.10%ಕ್ಕೆ ಅವಕಾಶ ಕಲ್ಪಿಸಲಾಗಿದೆ. ನಾಮಮಾತ್ರ ಸದಸ್ಯತ್ವಕ್ಕೆ ಇದ್ದ ಶರತ್ತುಗಳನ್ನು ತೆಗೆದು ಹಾಕಲಾಗಿದೆ.

ನಾಮಮಾತ್ರ ಸದಸ್ಯರಿಂದ (ನಾಮಿನಲ್ ಸದಸ್ಯರಿಂದ) ಠೇವಣಿ ಸ್ವೀಕರಿಸಲು ಅವಕಾಶಕಲ್ಪಿಸದಿರುವುದು, ಸಾಮಾನ್ಯ ಸಭೆಗಳಲ್ಲಿ ಸದಸ್ಯರ ಹಾಜರಾತಿಯನ್ನು ಹಾಲಿ ಇದ್ದ ಶೇ.20% ರಿಂದ ಶೇ.10% ಅಥವಾ 1000 ಸದಸ್ಯರು ಇದರಲ್ಲಿ ಯಾವುದು ಕಡಿಮೆಯೊ ಅದು ಕೋರಂ ಎಂದು ಪರಿಗಣಿಸಲು ಅವಕಾಶವಾಗಿದೆ. ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಮೇಲ್ಮನವಿಗೆ ಒಟ್ಟು ಮೊತ್ತದ ಶೇ.25% ಡಿಪಾಸಿಟ್ ಮಾಡುವುದು ಕಡ್ಡಾಯ, ನಿರ್ದೇಶಕರ ಸ್ಥಾನಕ್ಕೆ ರಾಜಿನಾಮೆ ನೀಡಿದವರು 15 ದಿನಗಳೊಳಗಾಗಿ ವಾಪಸ್ಸು ಪಡೆಯದಿದ್ದರೆ ರಾಜಿನಾಮೆ ಅಂಗೀಕಾರವಾದಂತೆ ಎಂದು ತಿಳಿಯುವುದು ಸೇರಿದಂತೆ ಒಟ್ಟಾರೆ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿಗಳ ವಿಷಯದ ಬಗ್ಗೆ ಸೌಹಾರ್ದ ಸಹಕಾರಿಗಳ ಸತತ ಪ್ರಯತ್ನಗಳಿಗೆ ಸರಕಾರ ಸ್ಪಂದಿಸಿರುವುದು, ಸರಕಾರ ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆಗೆ ಬದ್ಧವಾಗಿರುವುದು ಮತ್ತು ಅಗತ್ಯ ಪ್ರೋತ್ಸಾಹ ನೀಡುತ್ತಿರುವುದು ಸ್ವಾಗತಾರ್ಹ. ತಿದ್ದುಪಡಿಗಳು ಸರಕಾರವು ನೋಟಿಫಿಕೇಶನ್ ಮಾಡಿದ ದಿನದಿಂದ ಜಾರಿಗೆ ಬರುತ್ತವೆ. ತಿದ್ದುಪಡಿಯ ವಿವರಗಳು ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ■

# ಸಂಯುಕ್ತ ಸಹಕಾರಿಯ 13ನೇ ವಾರ್ಷಿಕ ಸಾಮಾನ್ಯ ಸಭೆ



**ಸದಸ್ಯ ಸಹಕಾರಿ ಪ್ರತಿನಿಧಿಗಳ ಒಮ್ಮತದ ನಿರ್ಣಯಗಳು ವ್ಯವಸ್ಥೆಗಳಿಗೆ ಸಂತೋಷ ವ್ಯಕ್ತಪಡಿಸಿದ ಪ್ರತಿನಿಧಿಗಳು :**

ದಿನಾಂಕ : 11–7–2014ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 13ನೇಯ ವಾರ್ಷಿಕ ಸಾಮಾನ್ಯ ಸಭೆಯು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಪ್ರಾರಂಭದಲ್ಲಿ ತಂಡದವರಿಂದ ಪ್ರಾರ್ಥನೆಯಾದ ನಂತರ ಪ್ರಸಕ್ತ ಸಾಲಿನಲ್ಲಿ ನಿಧನ ಹೊಂದಿದ ಅನೇಕ ಗಣ್ಯರಿಗೆ, ಸಹಕಾರಿ ಗಣ್ಯರಿಗೆ, ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ನಿರ್ದೇಶಕರುಗಳಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು.

ನಂತರ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಹೆಚ್.ವಿ.ರಾಜೀವರವರು ಸಂಯುಕ್ತ ಸಹಕಾರಿಯ ಅಧ್ಯಕ್ಷರು ನಿರ್ದೇಶಕರು ಹಾಗೂ ಸಾಮಾನ್ಯ ಸಭೆಯ ಎಲ್ಲ ಪ್ರತಿನಿಧಿಗಳನ್ನು ಸ್ವಾಗತಿಸಿದರು. ನಂತರ ಶ್ರೀ ಗುರುನಾಥ ಜಾಂತಿಕರರವರು ಪ್ರಾಸ್ತಾವಿಕವಾಗಿ ತಮ್ಮ ಭಾಷಣ ಮಾಡಿದರು.

## ಸೌಹಾರ್ದ ಸಹಕಾರಿಗಳ ಬೆಳವಣಿಗೆಯ ವೇಗ ಹೆಚ್ಚುತ್ತಿರುವುದು ಸಂತೋಷಕರ – ಶ್ರೀ ಗುರುನಾಥ ಜಾಂತಿಕರ

ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಬೆಳವಣಿಗೆಯ ವೇಗ ನಿರೀಕ್ಷೆಗಿಂತ ಹೆಚ್ಚಿದೆ. ಸಂಯುಕ್ತ ಸಹಕಾರಿಯ ಕಾರ್ಯ ಚಟುವಟಿಕೆಗಳು, ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆ, ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡಲು ಎಂ.ಬಿ.ಎ. ವಿದ್ಯಾರ್ಥಿಗಳು ಬರುತ್ತಿದ್ದಾರೆ. ವಿಶ್ವವಿದ್ಯಾನಿಲಯಗಳು ಆಸಕ್ತಿ ತೋರಿಸಿವೆ. ಕೆಲ ನಿವೃತ್ತ ಅಧಿಕಾರಿಗಳು ಆಸಕ್ತಿ ಹೊಂದಿದ್ದಾರೆ. ಹೊರ ರಾಜ್ಯದ ಸಹಕಾರಿಗಳು ಕರ್ನಾಟಕದ ಈ ಸೌಹಾರ್ದ ಸಹಕಾರಿ ವ್ಯವಸ್ಥೆ ಬಗ್ಗೆ ಮಾಹಿತಿ ಪಡೆಯುತ್ತಿದ್ದಾರೆ. ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಸೌಹಾರ್ದ ಸಹಕಾರಿಗಳ ಒಕ್ಕೂಟ ರಚನೆಗೆ ಪ್ರಯತ್ನಿಸಲಾಗಿದೆ. ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಮಾಡಿಕೊಡುವಂತೆ ಮಾನ್ಯ ಸಹಕಾರ ಸಚಿವರಲ್ಲಿ ಹಾಗೂ ಸಹಕಾರ ಇಲಾಖೆಯ ಅಧಿಕಾರಿಗಳಿಗೆ ಹಲವು ಬಾರಿ ವಿನಂತಿಸಲಾಗಿದೆ. ಯುವಜನಾಂಗವನ್ನು ಈ ಕ್ಷೇತ್ರದಲ್ಲಿ ಬರಮಾಡಿಕೊಳ್ಳಲು ರಾಷ್ಟ್ರಮಟ್ಟದಲ್ಲಿ ಸೌಹಾರ್ದ ಸಹಕಾರಿ ಒಕ್ಕೂಟ / ಕ್ರೆಡಿಟ್ ಸಹಕಾರಿ ಒಕ್ಕೂಟ / ಸ್ಥಾಪನೆಗೆ ಚಿಂತನೆ ನಡೆಸಿದೆ. ಸಹಕಾರಿಗಳಲ್ಲಿ ಎ.ಟಿ.ಎಮ್. ಸ್ಥಾಪನೆಗೆ ಕ್ರಮ. ಆಧುನಿಕ ತಂತ್ರಜ್ಞಾನಗಳ ಅಳವಡಿಕೆಗೆ ಆದ್ಯತೆ.

ಸಹಕಾರಿಗಳ ಹೆಚ್ಚುವರಿ ಠೇವಣಿಗಳ ಸದ್ಬಳಕೆಗೆ, ಲಾಭದಾಯಕ ಹೂಡಿಕೆಗಳ ನಿರ್ವಹಣೆಗೆ ಚಿಂತನೆ ಮಾಡಲಾಗಿದೆ.

ಸಹಕಾರಿಗಳ ನಿರ್ದೇಶಕರು ಹಾಗೂ ಸಿಬ್ಬಂದಿಯವರಿಗಾಗಿ ಅಧ್ಯಯನ ಪ್ರವಾಸ, ವಿಭಿನ್ನ ರೀತಿಯ ವಿಶಿಷ್ಠ ಮಾದರಿಯ ಸಹಕಾರಿಗಳ ಸ್ಥಾಪನೆಗೆ ಕ್ರಮ ಮುಂತಾದ ವಿಷಯಗಳ ಕುರಿತು ಹೇಳುತ್ತ ಭಾರತದ ನೂತನ ಸನ್ಮಾನ್ಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರಿಗೆ ಹಾಗೂ ಭಾರತರತ್ನ ಪ್ರಶಸ್ತಿ ಪುರಸ್ಕೃತ ವಿಜ್ಞಾನಿ ಕರ್ನಾಟಕದವರಾದ ಶ್ರೀ ಸಿ.ಎನ್.ಆರ್.ರಾವ್ ಇವರುಗಳಿಗೆ ರಾಜ್ಯದ ಸಮಸ್ತ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಿದರು. ನಂತರ ವಾರ್ಷಿಕ ಸಾಮಾನ್ಯ ಸಭೆಯ ವಿಷಯ ಪಟ್ಟಿಯಂತೆ ಕಾರ್ಯಕಲಾಪಗಳು ಜರುಗಿದವು. ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಬಿ.ಶಿವರುದ್ರಪ್ಪನವರು ವಂದನಾರ್ಪಣೆ ಮಾಡಿದರು.

## ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಶ್ರೀ ಎಚ್.ಕೆ. ಪಾಟೀಲ್‌ರವರಿಗೆ ಮನವಿ ಸಲ್ಲಿಕೆ ಹಾಗೂ ಸನ್ಮಾನ

ಗ್ರಾಮೀಣ ಹಾಗೂ ಪಂಚಾಯತ್‌ರಾಜ್ ಸಚಿವರು ಹಿರಿಯ ಸಹಕಾರಿಗಳು ಆದ ಶ್ರೀ ಎಚ್.ಕೆ.ಪಾಟೀಲ್ ಅವರನ್ನು ರಾಜ್ಯದ ಸಮಸ್ತ ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ಶಾಲು ಹಾರ ನೆನಪಿನ ಕಾಣಿಕೆ, ಫಲತಾಂಬೂಲಗಳನ್ನು ನೀಡಿ ಸನ್ಮಾನಿಸಿದರು. ರಾಜ್ಯದಲ್ಲಿ ಕಾಯ್ದೆಯ ತಿದ್ದುಪಡಿ ಸೇರಿದಂತೆ ಸೌಹಾರ್ದ ಸಹಕಾರಿಗಳು ಸ್ವಾಯತ್ತತೆಯನ್ನು ಸ್ವೇಚ್ಛಾಚಾರವಾಗಿ ದುರುಪಯೋಗಪಡಿಸಿಕೊಳ್ಳದಂತೆ ಕಾರ್ಯನಿರ್ವಹಿಸಲು ಸಂಯುಕ್ತ ಸಹಕಾರಿಯನ್ನು ಬಲಪಡಿಸುವ ಅಗತ್ಯತೆಗಾಗಿ ಕ್ರಮ ವಿಚಾರಣೆ ಹಾಗೂ ಸಮಾಪನೆಯ ಕ್ರಮಜರುಗಿಸಲು ಸಂಯುಕ್ತ ಸಹಕಾರಿಗೆ ಅಧಿಕಾರ, ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆಗೆ ಪೂರಕವಾಗುವಂತೆ ತಮ್ಮ ಹಾಗೂ ಸರಕಾರದ ಪ್ರೋತ್ಸಾಹ ಸೌಹಾರ್ದ ಸಹಕಾರಿಗಳ ಅಪೇಕ್ಷೆಯಾಗಿದೆ ಎಂದು ವಿನಂತಿಸಲಾಯಿತು.



## ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಪ್ರೋತ್ಸಾಹ – ಎಚ್.ಕೆ.ಪಾಟೀಲ್




ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಪ್ರಾರಂಭದಿಂದಲೂ ಪ್ರೋತ್ಸಾಹಿಸುತ್ತ ಬಂದಿದ್ದೇವೆ. ಮುಂದೆಯೂ ಸಹಕರಿಸುತ್ತೇವೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುವುದನ್ನು ಗಮನಿಸಲಾಗಿದೆ. ಅನೇಕ ಹಿರಿಯರು ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಕ್ಷೇತ್ರ ಇನ್ನೂ ಹೆಚ್ಚು ಉತ್ತಮವಾಗಿ ಬೆಳೆಯಲು ಅವಕಾಶವಿದೆ. ಈ ಕ್ಷೇತ್ರದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನಾನು ನಿಮ್ಮೊಡನೆ ಇರುವುದಾಗಿ ಶ್ರೀ ಎಚ್.ಕೆ. ಪಾಟೀಲ್ ತಿಳಿಸಿದರು.

## ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ



ಕರ್ನಾಟಕ ಸರಕಾರದ ಪ್ರತಿಷ್ಠಿತ ಪ್ರಶಸ್ತಿ ಪುರಸ್ಕೃತ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷ ಹಾಗೂ ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಶ್ರೀ ವಿಶ್ವನಾಥ ಚ.ಹಿರೇಮಠ ಹಾಗೂ ಸಹಕಾರಿ ಇಲಾಖೆಯ ನಿವೃತ್ತ ಅಪರ ನಿಬಂಧಕ ಮೈಸೂರಿನ ಶ್ರೀ ಸಿ.ಎನ್. ಪರಶಿವಮೂರ್ತಿ ಅವರುಗಳನ್ನು ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯ ವಾರ್ಷಿಕ ಸಭೆಯಲ್ಲಿ ಅಭಿನಂದಿಸಲಾಯಿತು.

# ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆ ಕುರಿತ ತರಬೇತಿ ಕಾರ್ಯಕ್ರಮ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ನೇತೃತ್ವದಲ್ಲಿ ಹಾಗೂ ಸಹಕಾರ ಇಲಾಖೆ, ಗುಲಬರ್ಗಾ ಇವರ ಸಹಯೋಗದೊಂದಿಗೆ ಕರ್ನಾಟಕ ರಾಜ್ಯ ಸರ್ಕಾರವು ನಗರ ಪ್ರದೇಶದ ಸಹಕಾರಿಗಳ ಸದಸ್ಯರುಗಳಿಗಾಗಿ ಜಾರಿಗೆ ತಂದಿರುವ "ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯ" ಕುರಿತು ಬೀದರ, ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ದಿನಾಂಕ : 07-07-2014ರಂದು ಗುಲಬರ್ಗಾದಲ್ಲಿ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಶ್ರೀ ಎಂ.ಡಿ. ಮಠಪತಿ, ಸಹಕಾರಿಗಳ ಅಪರ ನಿಬಂಧಕರು, ಬೆಂಗಳೂರು ಇವರು ದೀಪ ಬೆಳಗಿಸುವ ಮೂಲಕ ಕಾರ್ಯ ಕ್ರಮವನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಶಾಂತಿನಾಥ ಪಂಡಿತ, ನಿರ್ದೇಶಕರು, ಸಂಯುಕ್ತ ಸಹಕಾರಿ ಬೆಂಗಳೂರು, ಶ್ರೀ ವೈ.ಟಿ.ಪಾಟೀಲ್, ನಿರ್ದೇಶಕರು, ಸಂಯುಕ್ತ ಸಹಕಾರಿ ಹಾಗೂ ಶ್ರೀ ವಿಶ್ವನಾಥ ಮಲಕೂಡ, ಸಹಕಾರಿಗಳ ಉಪ ನಿಬಂಧಕರು, ಗುಲಬರ್ಗಾ ಜಿಲ್ಲೆ ಇವರಗಳು ಉಪಸ್ಥಿತರಿದ್ದರು.

ಉದ್ಘಾಟನಾ ಕಾರ್ಯಕ್ರಮದ ನಂತರ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಶ್ರೀ ಶರಣಬಸಪ್ಪ ರೋಜಾ, ಸಹಕಾರಿಗಳ ಸಹಾಯಕ ನಿಬಂಧಕರು(ನಿ), ಗುಲಬರ್ಗಾ ಹಾಗೂ ಶ್ರೀ ದೇವರಾಜ್, ಜಿಲ್ಲಾ ಸಮನ್ವಯ ಅಧಿಕಾರಿ, ಯಶಸ್ವಿನಿ ಟ್ರಸ್ಟ್ ಗುಲಬರ್ಗಾ ಇವರುಗಳು "ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯಡಿಯಲ್ಲಿ ನೋಂದಾಯಿಸಿಕೊಳ್ಳಲು ಅರ್ಹತೆಗಳು, ಈ ಯೋಜನೆಯಡಿಯಲ್ಲಿ ದೊರಕುವ ಸೌಲಭ್ಯಗಳು ಮತ್ತು ಇದರ ಪ್ರಯೋಜನ ಪಡೆಯಲು ಅನುಸರಿಸಬೇಕಾದ ಕ್ರಮಗಳು" ಇವುಗಳ ಬಗ್ಗೆ ಉಪನ್ಯಾಸವನ್ನು ನೀಡಿದರು. ನಂತರ ನಾರಾಯಣ ಹೃದಯಾಲಯದ ಶ್ರೀ ಗೋಪಾಲ್ ರವರು ನಾರಾಯಣ ಹೃದಯಾಲಯದಲ್ಲಿ ಯಶಸ್ವಿನಿ ಯೋಜನೆಗೆ ದೊರಕುವ ಸೌಲಭ್ಯಗಳ ಬಗ್ಗೆ ಸಹಕಾರಿ ಪ್ರತಿನಿಧಿಗಳಿಗೆ ವಿವರಿಸಿದರು.

ಈ ತರಬೇತಿ ಕಾರ್ಯಕ್ರಮದಲ್ಲಿ ಬೀದರ, ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ 78 ಸೌಹಾರ್ದ ಸಹಕಾರಿಗಳಿಂದ 89 ಜನ ಸಹಕಾರಿ ಪ್ರತಿನಿಧಿಗಳು ಭಾಗವಹಿಸಿ ತರಬೇತಿ ಕಾರ್ಯಕ್ರಮದ ಪ್ರಯೋಜನವನ್ನು ಪಡೆದುಕೊಂಡರು. ■

## ಸರಣಿ ಉಪನ್ಯಾಸ ಮಾಲಿಕೆ



ಸಂಯುಕ್ತ ಸಹಕಾರಿಯ ನೂತನ ತರಬೇತಿ ಕಾರ್ಯಕ್ರಮ ಸರಣಿ ಉಪನ್ಯಾಸ ಮಾಲಿಕೆ ಕಾರ್ಯ ಕ್ರಮದ ಅಂಗವಾಗಿ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ ಮುಕ್ತಾಯವಾದ ಬಳಿಕ "ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಪರಿಣಾಮಕಾರಿ ನಾಯಕತ್ವ" ವಿಷಯದ ಕುರಿತು ಮೈಸೂರು ವಿಶ್ವವಿದ್ಯಾಲಯದ ಪ್ರೊ.ಯಶವಂತ ಡೊಂಗ್ರೆ ಅವರಿಂದ ಉಪನ್ಯಾಸ ಏರ್ಪಡಿಸಲಾಗಿತ್ತು.

## ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆ



ಕರ್ನಾಟಕ ಸರಕಾರವು ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ನಗರ ಸಹಕಾರಿಗಳಿಗೆ ವಿಸ್ತರಿಸಿರುವ ಬಗ್ಗೆ ಹಾಗೂ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯನ್ನು ಸೌಹಾರ್ದ ಸಹಕಾರಿಗಳು ಅಳವಡಿಸಿಕೊಳ್ಳಲು ಅನುಸರಿಸ ಬಹುದಾದ ಕ್ರಮಗಳ ಬಗ್ಗೆ ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆ ಕೇಂದ್ರ ಕಚೇರಿಯ ಡಾ.ಎಸ್. ಧನಂಜಯರವರು ವಿವರಗಳನ್ನು ನೀಡಿದರು.

# ದಿ ಪಾವಗಡ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿಯ ನಿರ್ದೇಶಕರು ಹಾಗೂ ಶಾಖಾ ಉಸ್ತುವಾರಿ ಸದಸ್ಯರಿಗಾಗಿ 2 ದಿನಗಳ ತರಬೇತಿ


ಸಹಕಾರ ಸಂಘಗಳ ಜಂಟಿ ನಿಬಂಧಕ ಶ್ರೀ ಕೆ.ಎಸ್.ನವೀನ್ ಅವರಿಂದ ಉದ್ಘಾಟನೆ


ಭಾಗವಹಿಸಿದ್ದ ಪ್ರತಿನಿಧಿಗಳು

ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ದಿ ಪಾವಗಡ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ನಿರ್ದೇಶಕರು ಹಾಗೂ ಶಾಖಾ ಉಸ್ತುವಾರಿ ಸದಸ್ಯರುಗಳು ಹಾಗೂ ಶಾಖಾ ವ್ಯವಸ್ಥಾಪಕರುಗಳಿಗಾಗಿ 2 ದಿನಗಳ ವಿಶೇಷ ತರಬೇತಿ ಕಾರ್ಯಕ್ರಮವನ್ನು ಬೆಂಗಳೂರಿನ ಪದ್ಮನಾಭನಗರದ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ದಿನಾಂಕ : 5,6ನೇ ಜುಲೈ 2014 ರಂದು ನಡೆಯಿತು.

ಕಾರ್ಯಕ್ರಮವನ್ನು ಸಹಕಾರ ಇಲಾಖೆಯ ಜಂಟಿ ನಿಬಂಧಕ ಶ್ರೀ ಕೆ.ಎಸ್.ನವೀನ್‌ರವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರರವರು ವಹಿಸಿದ್ದರು. ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕ ಶ್ರೀ ವಸಂತ ನಾಯ್ಕ ಹಾಗೂ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಡಾ.ಸಿದ್ಧಾಂತಿಯವರು ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳ ಬಗ್ಗೆ, ಶ್ರೀ ಭಾಸ್ಕರ ಹೆಗಡೆಯವರು ನಿರ್ದೇಶಕರ ಕರ್ತವ್ಯ ಹಾಗೂ ಜವಾಬ್ದಾರಿಗಳು, ಶ್ರೀ ಚಂದ್ರಶೇಖರ ಹವಾಲ್ದಾರ್, ಸಹಕಾರಿ ಕಾರ್ಯಕರ್ತ, ಶ್ರೀ ಬಿ.ಎ.ಮಹದೇವಪ್ಪನವರು ಮಾನವೀಯ ಮೌಲ್ಯಗಳು ಹಾಗೂ ಆಂತರಿಕ ಸಂಬಂಧಗಳ ಬಗ್ಗೆ ಹಾಗೂ ಡಾ.ನಂದೀಶ ಹಿರೇಮಠರವರು ಗ್ರಾಹಕರ ಸೇವೆಗಳ ನಿರ್ವಹಣೆಯ ಬಗ್ಗೆ ಉಪಯುಕ್ತ ಉಪನ್ಯಾಸಗಳು ಪರಿಣಾಮಕಾರಿಯಾಗಿತ್ತೆಂದು ಭಾಗವಹಿಸಿದ ಪ್ರತಿನಿಧಿಗಳು ಅಭಿಪ್ರಾಯವ್ಯಕ್ತಪಡಿಸಿದರು. ಇದೇ ಕಾರ್ಯಕ್ರಮದ ಅಂಗವಾಗಿ ಸಂವಾದ ಪ್ರತಿನಿಧಿಗಳ ಪ್ರಶ್ನೆಗಳಿಗೆ ಸ್ಪಂದಿಸುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಚಾರ್ಟರ್ಡ್ ಅಕೌಂಟೆಂಟ್ ಶ್ರೀ ಮಧುಕರ ಹೆಗಡೆ, ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ.ಕುಮಾರ ಸಹಪ್ರಧಾನ ವ್ಯವಸ್ಥಾಪಕ ಶ್ರೀ ಶ್ರೀಕಾಂತರವರು ಭಾಗವಹಿಸಿದ್ದರು.

ಮುಕ್ತಾಯ ಸಮಾರಂಭದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ರಾಷ್ಟ್ರೀಯ ಸಹಕಾರ ಭಾರತೀಯ ಕಾರ್ಯದರ್ಶಿ ಶ್ರೀ ರಮೇಶ ವೈದ್ಯ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರ, ನಿವೃತ್ತ ಅಪರ ನಿಬಂಧಕರಾದ ಶ್ರೀ ಎಂ.ಜಿ. ಪಾಟೀಲ ಅವರುಗಳು ಭಾಗವಹಿಸಿ ಕಾರ್ಯಕ್ರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಇಂತಹ ಕಾರ್ಯಕ್ರಮಗಳನ್ನು ಎಲ್ಲ ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿಯ ಸದಸ್ಯರುಗಳ ಒಳಿತಿಗಾಗಿ ಸಹಕಾರಿಯ ಅಭಿವೃದ್ಧಿಗಾಗಿ ಹಮ್ಮಿಕೊಳ್ಳುವುದು ಅಗತ್ಯವೆಂದು ತಿಳಿಸಿದರು. ■


ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಣ್ಯರು.

## ಉದ್ಯೋಗ ಅನ್ವೇಷಣೆ ಬದಲಿಗೆ ಉದ್ಯೋಗ ಸೃಷ್ಟಿಗೆ ಯುವಕರು ಮುಂದಾಗಬೇಕು – ಶ್ರೀ ಎಚ್.ವಿ.ರಾಜೀವ

ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಮಾರಾಟ ವಿಭಾಗವನ್ನು ಕಾಲೇಜಿನ ಆವರಣದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಎಚ್.ವಿ.ರಾಜೀವರವರು ಉದ್ಘಾಟಿಸಿ, ಮಾತನಾಡುತ್ತ ಯುವಜನಾಂಗಕ್ಕೆ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿನೀಡಿ ಅವರನ್ನು ಸಕ್ರೀಯವಾಗಿ ಈ ಕ್ಷೇತ್ರದಲ್ಲಿ ತೊಡಗಿಸುವ ಉದ್ದೇಶವಿದೆ, ಯುವಕರಲ್ಲಿ ಸಹಕಾರ ಪ್ರಜ್ಞೆಯನ್ನು ಮೂಡಿಸುವ ಅಗತ್ಯತೆಯಿದೆ, ಯುವಕರು ಉದ್ಯೋಗ ಅನ್ವೇಷಣೆಯ ಬದಲು ಉದ್ಯೋಗ ಸೃಷ್ಟಿಗೆ ಚಿಂತನೆ ನಡೆಸಲು ಈ ಕಾರ್ಯಾಗಾರ ಉತ್ತಮ ಅವಕಾಶವಾಗಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಶ್ರೀ ವಾಸುದೇವಮೂರ್ತಿಯವರು ವಹಿಸಿ ಸಹಕಾರ ಕ್ಷೇತ್ರದಿಂದ ಸಮಾಜದ ಅಭಿವೃದ್ಧಿ ಸಾಧ್ಯ ಎಂಬ ನಂಬಿಕೆಯಿಂದಲೇ ಈ ರೀತಿಯ ಸಹಕಾರ ಸಂಸ್ಥೆಗಳನ್ನು ಸ್ಥಾಪಿಸಲು ಮಹಾಜನ ಸಂಸ್ಥೆ ಮುಂದಾಗಿದೆ, ಇದರಿಂದ ವಿದ್ಯಾರ್ಥಿ ವೃಂದದವರಿಗೆ ಉತ್ತಮ ಪ್ರಯೋಜನವಾಗುತ್ತದೆ. ಯುವ ವಯಸ್ಸಿನಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಮಾಹಿತಿ ಪಡೆದುಕೊಂಡ ಯುವ ಜನಾಂಗ ದೇಶದ ಉತ್ತಮ ಸಹಕಾರಿಗಳಾಗಿ ಉತ್ತಮ ನಾಯಕರಾಗಿ ಬೆಳೆಯುವ ಸಾಧ್ಯತೆ ಹೆಚ್ಚು ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಶ್ರೀ ಪ್ರಭಾಕರರವರು ಪ್ರಾಸ್ತಾವಿಕವಾಗಿ ಮಾತನಾಡಿ, ಈ ಸಂಸ್ಥೆಗೆ ಉಜ್ವಲ ಭವಿಷ್ಯವಿದೆ, 3000 ಫಲಾನುಭವಿಗಳು ಈ ಸಹಕಾರಿಯ ವ್ಯಾಪ್ತಿಯಲ್ಲಿದ್ದಾರೆ. ಇದೇ ರೀತಿಯ ವಿದ್ಯಾರ್ಥಿ ಸಹಕಾರಿ ಸಂಸ್ಥೆಗಳನ್ನು ಮೈಸೂರು ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲ ಕಾಲೇಜುಗಳಲ್ಲಿ ಪ್ರಾರಂಭಿಸುವ ಮಹತ್ವಾಂಕಾಂಕ್ಷೆಯನ್ನು ಈ ಸೌಹಾರ್ದ ಸಹಕಾರಿ ಹೊಂದಿದೆ. ಸಂಯುಕ್ತ ಸಹಕಾರಿಯವರು ಈ



ಕಾರ್ಯದಲ್ಲಿ ಸಹಯೋಗ ನೀಡಿರುವುದು ಸ್ವಾಗತಾರ್ಹ. ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ಸಹಕಾರ ಸಂಸ್ಥೆಗಳನ್ನು ನೋಂದಣೆಮಾಡುವ ವಿಧಾನದ ಬಗ್ಗೆ ಸಹಕಾರ ಇಲಾಖೆಯ ನಿವೃತ್ತ ಜಂಟಿನಿಬಂಧಕ ಶ್ರೀ ಕೃಷ್ಣಯ್ಯಗೌಡರವರು ಉಪನ್ಯಾಸ ನೀಡಿದರು. ಪ್ರೊ.ಸಿ.ಕೆ. ರೇಣುಕಾರ್ಯರವರು ಸಹಕಾರ ತತ್ವದಡಿಯಲ್ಲಿ ಇಂತಹ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸುವುದು ಬಹಳ ಒಳ್ಳೆಯದು. ರಾಜ್ಯದಲ್ಲಿ 2001 ರಿಂದ ಜಾರಿಗೆ ಬಂದಿರುವ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಇಂತಹ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸುವುದು ಉತ್ತಮ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಹೆಚ್ಚಿನ ಸ್ವಾಯತ್ತತೆ ಈ ಕ್ಷೇತ್ರದಲ್ಲಿದೆ. ಉತ್ತಮ ಆರ್ಥಿಕ ಸಂಘಟನೆಗಳಾಗಿ ಬೆಳೆಯಲು ಎಲ್ಲ ಅವಕಾಶಗಳಿವೆ ಎಂದು ತಿಳಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಮೈಸೂರು ವಿಶ್ವವಿದ್ಯಾಲಯದ ಪ್ರೊ.ಯಶವಂತ ಡೊಂಗ್ರೆಯವರು ಕ್ಯಾಂಪಸ್ ಕೋ–ಆಪರೇಟಿವ್‌ಗಳ ಬಗ್ಗೆ ವಿವರವಾಗಿ ಮಾತನಾಡಿದರು. ■



## ನೂತನ ಕಟ್ಟಡ ಉದ್ಘಾಟನಾ ಸಮಾರಂಭ

ಶ್ರೀ ವೀರಾಚಾರ್ಯ ಅಲ್ಪ ಸಂಖ್ಯಾತರ ಸೌಹಾರ್ದ ವಿವಿಧ ಉದ್ದೇಶಗಳ ಸಹಕಾರಿ ನಿಯಮಿತದ ಬೇಡಕಿಹಾಳದಲ್ಲಿ ಸಹಕಾರಿಯ ನೂತನ ಕಟ್ಟಡದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ್‌ರವರು ಉದ್ಘಾಟಿಸಿದರು. ಸಮಾರಂಭದ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ರಾವಸಾಹೇಬ ಅ. ಪಾಟೀಲರವರು, ಶ್ರೀ ಜಯಾನಂದ ಜಾಧವರವರು, ಶ್ರೀ ಶ್ರೀಕಾಂತ್ ಹತನೂರೆರವರು ಹಾಗೂ ಸಹಕಾರಿಯ ಆಡಳಿತ ಮಂಡಳಿಯವರು ಭಾಗವಹಿಸಿದ್ದರು. ■

# ಯುವ ಸಹಕಾರಿ ಪಡೆ ನಿರ್ಮಾಣ ಕಾರ್ಯದಲ್ಲಿ (ಕ್ಯಾಂಪಸ್ಸ್ ಕೋ-ಆಪರೇಟಿವ್ಸ್) ವಿದ್ಯಾರ್ಥಿ ಸೌಹಾರ್ದ ಸಹಕಾರ ಸಂಸ್ಥೆಗಳ ಪಾತ್ರ ಮಹತ್ವದ್ದು – ಪ್ರೊ. ಯಶವಂತ ಡೋಂಗ್ರೆ



ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ಪ್ರೊ. ಯಶವಂತ ಡೊಂಗ್ರೆಯವರು ಕ್ಯಾಂಪಸ್ಸ್ ಕೋ-ಆಪರೇಟಿವ್ ಎಂಬ ಸಹಕಾರಿ ಸಂಸ್ಥೆಯು ಪ್ರಪ್ರಥಮವಾಗಿ 1860ರಲ್ಲಿ ಲ್ಯಾಟಿನ್ ಅಮೆರಿಕಾದಲ್ಲಿ ಪ್ರಾರಂಭವಾಯಿತು. ಶಿಕ್ಷಣ ಸಂಸ್ಥೆಯ ಬೋಧಕರು ಬೋಧಕೇತರರು ಹಾಗೂ ವಿದ್ಯಾರ್ಥಿಗಳು ನಡೆಸುವ ಸಹಕಾರಿ ಸಂಸ್ಥೆ ಇದಾಗಿದೆ. 2008ರಲ್ಲಿ ಯುನೆಸ್ಕೊದವರು ವಿದ್ಯಾರ್ಥಿಗಳಿಗೆ ನೆರವಾಗುವ ಹಾಗೂ ಸೇವೆ ಸಲ್ಲಿಸುವ ದೃಷ್ಟಿಯಿಂದ ಇಂತಹ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸುವ ಅಗತ್ಯತೆಯನ್ನು ಒತ್ತಿ ಹೇಳಿದರು.

ಮಹಾರಾಷ್ಟ್ರದಲ್ಲಿ 1912ರಲ್ಲಿ ಮೊದಲನೇಯ ಕ್ಯಾಂಪಸ್ ಸಹಕಾರಿ ಸಂಸ್ಥೆಯ ಸ್ಥಾಪನೆಯಾಯಿತು. ನಂತರ 1918ರಲ್ಲಿ ಪಂಜಾಬಿನಲ್ಲಿ ಸ್ಥಾಪನೆಯಾಯಿತು. 1990 ವೇಳೆಗೆ ದೇಶದಲ್ಲಿ 1250 ಸಹಕಾರಿ ಸಂಸ್ಥೆಗಳು ಸ್ಥಾಪನೆಯಾಗಿ ಕಾರ್ಯನಿರ್ವಹಿಸುತ್ತಿವೆ. ಪ್ರಸ್ತುತ ದೇಶದಲ್ಲಿರುವ 9000 ಸಹಕಾರಿ ಸಂಸ್ಥೆಗಳಲ್ಲಿ ಕೇರಳ ಮತ್ತು ತಮಿಳನಾಡುವಿನಲ್ಲಿ 6000 ಸಹಕಾರಿ ಸಂಸ್ಥೆಗಳಿದ್ದರೆ ಇಡೀ ದೇಶದ ಉಳಿದೆಡೆ 3000 ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ವಿದ್ಯಾರ್ಥಿ ದೆಸೆಯಲ್ಲಿ ಸಹಕಾರಿ ಕ್ಷೇತ್ರದ ಕಾರ್ಯನಿರ್ವಹಣೆಯ ಬಗ್ಗೆ ಯುವಕರಿಗೆ ತರಬೇತಿ ನೀಡುವ ವ್ಯವಸ್ಥೆಯು ಇದಾಗಿದೆ. ಸಹಕಾರಿಯನ್ನು ಸ್ಥಾಪಿಸಲು ಆಯಾ ಕಾಲೇಜಿನ ಆಡಳಿತ ವರ್ಗ ಮತ್ತು ಪ್ರಾಂಶುಪಾಲರುಗಳ ಆಸಕ್ತಿ ಹಾಗೂ ತೊಡಗಿಸಿಕೊಳ್ಳುವಿಕೆ ಮಹತ್ವದ್ದಾಗಿದೆ. ಕಾಲೇಜುಗಳಲ್ಲಿ ಆಯಾ ಕಾಲೇಜಿನ ವಿವಿಧೋದ್ದೇಶ ಸಹಕಾರಿ ಎಂದು ಪ್ರಾರಂಭಿಸಲು ಕ್ರಮವಿಡಬೇಕು. ಈ ಕಾರ್ಯದಲ್ಲಿ ಸಂಯುಕ್ತ ಸಹಕಾರಿಯು ನೆರವು ನೀಡುತ್ತದೆ. ವಿಶ್ವವಿದ್ಯಾಲಯದ ಪ್ರಾಸ್ಪೆಕ್ಟಸ್‌ನಲ್ಲಿ ಸಹಕಾರಿ ಸಂಸ್ಥೆಗಳ ಬಗ್ಗೆ ಮಾಹಿತಿ ಇರಬೇಕು ಎಂದು ತಿಳಿಸಿದರು. ವಿಚಾರಗೋಷ್ಠಿಯ ಕೊನೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಹಾಜನ ಕಾಲೇಜಿನ ಪ್ರಾಂಶುಪಾಲ ಡಾ. ಪ್ರಭಾಕರರವರು ಕಾರ್ಯಾಗಾರದಲ್ಲಿ ಉತ್ತಮ ವಿಷಯಗಳ ಮಂಡನೆಯಾಗಿದೆ. ಸಂಪನ್ಮೂಲ ವ್ಯಕ್ತಿಗಳು ಉತ್ತಮ ಮಾಹಿತಿ ನೀಡಿದ್ದಾರೆ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯವರು ಉತ್ತಮ ಸಹಯೋಗ ನೀಡಿದ್ದಾರೆ. ಇದೇ ಸಂದರ್ಭದಲ್ಲಿ ಉಪಸ್ಥಿತರಿದ್ದ ಹುಣಸೂರು ಸರಕಾರಿ ಕಾಲೇಜಿನ ಪ್ರಾಂಶುಪಾಲರು ತಮ್ಮ ಕಾಲೇಜಿನಲ್ಲಿ ಈ ರೀತಿಯ ಸೌಹಾರ್ದ ಸಹಕಾರಿಯನ್ನು ಪ್ರಾರಂಭಿಸಲು ಕ್ರಮವಿಡುವುದಾಗಿ ತಿಳಿಸಿದರು.

**ವಿದ್ಯಾರ್ಥಿ ಸ್ವಯಂ ಸೇವಾ ಸಂಘಗಳ ಸ್ಥಾಪನೆ ರಚನೆಗೆ ಕ್ರಮ :** ವಿದ್ಯಾರ್ಥಿ ಸ್ವಯಂ ಸೇವಾ ಸಂಘಗಳ ಸ್ಥಾಪನೆ ರಚನೆಗೆ ಹೆಚ್ಚು ಒತ್ತು ನೀಡಲು ನಿರ್ಧರಿಸಲಾಯಿತು. ವಿದ್ಯಾರ್ಥಿಗಳಲ್ಲಿ ಉಳಿತಾಯ ಮನೋಭಾವವನ್ನು ಬೆಳೆಸುವುದು ಹಾಗೂ ಅಗತ್ಯವಿದ್ದಲ್ಲಿ ಸಾಲ ನೀಡುವುದು ಇದರ ಉದ್ದೇಶ. ಯುವಕರಲ್ಲಿ ಸಾಮಾಜಿಕ ಅಭಿವೃದ್ಧಿಯ ಪ್ರಜ್ಞೆ ಮೂಡಿಸುವುದು ಹಣಕಾಸಿನ ನಿರ್ವಹಣೆ ಹಾಗೂ ನಾಯಕತ್ವ ಬೆಳೆಸುವಲ್ಲಿ ಈ ಸ್ವಯಂ ಸೇವಾ ಸಂಸ್ಥೆಗಳು ಮಹತ್ವದ ಪಾತ್ರ ನಿರ್ವಹಿಸುತ್ತವೆ ಎಂದು ತಿಳಿಸಿದರು. ■

## ಸಂಯುಕ್ತ ಸಹಕಾರಿಯ ನಿರ್ದೇಶಕರುಗಳ ಅಧ್ಯಯನ ಪ್ರವಾಸ



ದಿನಾಂಕ 30.07.2014 ರಿಂದ 15.07.2014 ರವರೆಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಚೀನಾ, ಹಾಂಕಾಂಗ್ ಹಾಗೂ ಬ್ಯಾಂಕಾಕ್‌ಗಳ ಸಹಕಾರಿಗಳ ವ್ಯವಸ್ಥೆಯ ಅಧ್ಯಯನ ಪ್ರವಾಸ ಕೈಗೊಂಡರು. ಸಂಯುಕ್ತ ಸಹಕಾರಿಯ ಸಿಬ್ಬಂದಿಯವರ ಪರವಾಗಿ ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆಯವರು ಹೂಗುಚ್ಛ ನೀಡಿ ಶುಭಹಾರೈಸಿದರು.

## ಮೈಸೂರಿನ ಸಪ್ತರ್ಷಿ ಸೌಹಾರ್ದ ಸಹಕಾರಿಯಲ್ಲಿ ಸದಸ್ಯ ಶಿಕ್ಷಣ ಕಾರ್ಯಕ್ರಮ

# ಸದಸ್ಯರಿಗೆ ಸಹಕಾರಿಯ ಕಾರ್ಯಚಟುವಟಿಕೆಗಳ ಮಾಹಿತಿ ಅಗತ್ಯ – ಹೆಚ್.ವಿ.ರಾಜೀವ




ಕಾರ್ಯಕ್ರಮ ಉದ್ಘಾಟನೆ



ಸದಸ್ಯರಿಗೆ ಆರೋಗ್ಯ ತಪಾಸಣೆ

ಮೈಸೂರಿನ ಸಪ್ತರ್ಷಿ ಸೌಹಾರ್ದ ಸಹಕಾರಿಯಲ್ಲಿ ದಿನಾಂಕ : 27/7/2014ರಂದು ಸಹಕಾರಿಯ ನಿರ್ದೇಶಕರು ಹಾಗೂ ಸದಸ್ಯರುಗಳಿಗಾಗಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಹೆಚ್.ವಿ.ರಾಜೀವರವರು ಸಹಕಾರಿ ಕ್ಷೇತ್ರದ ಚಟುವಟಿಕೆಗಳ ಬಗ್ಗೆ ಸದಸ್ಯರಿಗೆ ಮಾಹಿತಿನಿಡುವ ಈ ಕಾರ್ಯಕ್ರಮ ಅತ್ಯಂತ ಮಹತ್ವದ್ದು. ಎಲ್ಲ ಸಹಕಾರಿ ಸಂಸ್ಥೆಗಳಲ್ಲಿ ಈ ರೀತಿಯ ತರಬೇತಿ ಕಾರ್ಯಕ್ರಮಗಳು ನಡೆಯಬೇಕು ಎಂಬುದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

ಈ ತರಬೇತಿ ಶಿಬಿರಗಳನ್ನು ಹಮ್ಮಿಕೊಳ್ಳಲು ಅಗತ್ಯ ನೆರವು ಹಾಗೂ ಮಾರ್ಗದರ್ಶನ ಮಾಡುತ್ತದೆ. ಅರಿತ ಸದಸ್ಯರಿಂದಲೇ ಸಹಕಾರಿಯ ಅಭಿವೃದ್ಧಿ ಸಾಧ್ಯವಾಗುತ್ತದೆ. ಸಹಕಾರಿಯ ಎಲ್ಲ ಚಟುವಟಿಕೆಗಳಲ್ಲಿ ಸದಸ್ಯರು ಸಕ್ರೀಯವಾಗಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿ ಇಲಾಖೆಯ ನಿವೃತ್ತ ಅಪರ ನಿಬಂಧಕ ಶ್ರೀ ಸಿ.ಎನ್.ಪರಶಿವಮೂರ್ತಿಯವರು ಸಹಕಾರಿ ಇಲಾಖೆಯ ಉಪನಿಬಂಧಕ ಶ್ರೀ ಬಿ.ಶಶಿಧರರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷ ಶ್ರೀ ಕೆ.ವಿ.ನಾಗೇಂದ್ರರವರು ವಹಿಸಿದ್ದರು. ಸ್ವಾಗತ ಹಾಗೂ ಪ್ರಾಸ್ತಾವಿಕವನ್ನು ಶ್ರೀ ನಾ.ನಾಗಚಂದ್ರರವರು ನಡೆಸಿಕೊಟ್ಟರು. ನಿರೂಪಣೆಯನ್ನು ಶ್ರೀ ಹೃಷಿಕೇಶರವರು ಹಾಗೂ ವಂದನಾರ್ಪಣೆಯನ್ನು ಉಪಾಧ್ಯಕ್ಷ ಶ್ರೀ ಟಿ.ಎಸ್.ಶೇಷಾದ್ರಿಯವರು ನಿರ್ವಹಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಬಿ.ಎ.ಮಹದೇವಪ್ಪ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು ಹಾಗೂ ಸನ್ಮತಿ ಫೌಂಡೇಶನ್ ಶಿವಮೊಗ್ಗ ಇವರಿಂದ ಸಹಕಾರ ಸಂಘಗಳಲ್ಲಿ ಆಂತರಿಕ ಸಂಬಂಧಗಳ ನಿರ್ವಹಣೆ–ಮಾನವೀಯ ಮೌಲ್ಯಗಳು ಸದಸ್ಯರ ಜವಾಬ್ದಾರಿ ಹಾಗೂ ಕರ್ತವ್ಯಗಳು ಎಂಬ ವಿಷಯಗಳ ಬಗ್ಗೆ ಉಪನ್ಯಾಸವನ್ನು ಹಾಗೂ ಉಚಿತ ವೈದ್ಯಕೀಯ ತಪಾಸಣೆಯನ್ನು ಏರ್ಪಡಿಸಲಾಗಿತ್ತು. 150 ಜನ ಸದಸ್ಯರು ಉಪಸ್ಥಿತರಿದ್ದು ಕಾರ್ಯಕ್ರಮದ ಪ್ರಯೋಜನ ಪಡೆದರು.

# 5ನೇ ವಾರ್ಷಿಕೋತ್ಸವ



ಶ್ರೀ ಶಾಂತೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಇಂಡಿ ಇದರ 5ನೇ ವಾರ್ಷಿಕೋತ್ಸವ ಸಮಾರಂಭವನ್ನು ಸಂಸದರಾದ ಶ್ರೀ ರಮೇಶ ಜಿಗಜಿಣಗಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶ್ರೀ ಶಾಂತೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಇಂಡಿ ಇದರ ಅಧ್ಯಕ್ಷರಾದ ಶ್ರೀ ಕಾಸುಗೌಡ ಈ. ಬಿರಾದಾರ ಮುಖ್ಯಕಾರ್ಯನಿರ್ವಾಹಕ ಶ್ರೀ ಶಂಕರಗೌಡ ಎಸ್. ಪಾಟೀಲ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ದಾದಾಗೌಡ ಪಾಟೀಲ, ಬಸವರಾಜ ದೇವರ, ಪ್ರಭಾಕರ ಬಗಲಿ ರಮೇಶ ಗುತ್ತೇದಾರ ಉಪಸ್ಥಿತರಿದ್ದರು.

### ಬೀದರ್ : ಅಧಿಪ್ರೇರಣೆ ಮತ್ತು ಗುಣಮಟ್ಟ ನಿರ್ವಹಣೆ ತರಬೇತಿ ಕಾರ್ಯಗಾರ

## ಸಹಕಾರ ಕ್ಷೇತ್ರದಿಂದ ಸಾಮಾನ್ಯ ವ್ಯಕ್ತಿಯೂ ಸಹ ಪ್ರಯೋಜನ ಪಡೆಯಲು ಸಾಧ್ಯ : ಶ್ರೀ ಗುರುನಾಥ ಜಾಂತಿಕರ



ಸಹಕಾರ ಕ್ಷೇತ್ರವು ಸಮಾಜದ ಎಲ್ಲಾ ಕ್ಷೇತ್ರಗಳಿಗೆ ಹರಡುವ ಮೂಲಕ ಸಮಾಜದ ಸಾಮಾನ್ಯ ವ್ಯಕ್ತಿಯೂ ಸಹ ಸಹಕಾರ ಕ್ಷೇತ್ರದಿಂದ ಅನುಕೂಲ ಪಡೆದು, ಆ ಮೂಲಕ ತನ್ನ ಜೀವನವನ್ನು ರೂಪಿಸಿ ಕೊಂಡು ಅಭಿವೃದ್ಧಿ ಹೊಂದಲು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾತಿಕರವರು ಅಭಿಪ್ರಾಯಪಟ್ಟರು.

ಶ್ರೀಯುತರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನೇತೃತ್ವದಲ್ಲಿ ದಿನಾಂಕ : 04-06-2014 ಬೀದರ್‌ನ ಸ್ವಪ್ನಾ ಇಂಟರನ್ಯಾಷನಲ್‌ನಲ್ಲಿ ಬೀದರ್ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಹಾಗೂ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕರಿಗಾಗಿ ಆಯೋಜಿಸಿದ್ದ 'ಅಧಿಪ್ರೇರಣೆ ಮತ್ತು ಗುಣಮಟ್ಟ ನಿರ್ವಹಣೆ' ತರಬೇತಿ ಕಾರ್ಯಕ್ರಮ ಮತ್ತು ಸಹಕಾರ ಕುರಿತು ಸರಣಿ ಉಪನ್ಯಾಸ ಮಾಲಿಕೆ-2 ಕಾರ್ಯಕ್ರಮವನ್ನು ಉದ್ಘಾಟಿಸಿ ಹಾಗೂ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಸಹಕಾರಿ ಕ್ಷೇತ್ರವು ಪ್ರಸ್ತುತ ನಗರ ಮತ್ತು ಗ್ರಾಮೀಣ ಭಾಗಗಳಿಗೂ ವ್ಯಾಪಿಸಿದ್ದು, ಎಲ್ಲಾ ಕ್ಷೇತ್ರಗಳಿಗೂ ಸಹಕಾರ ಕ್ಷೇತ್ರ ತನ್ನ ವ್ಯಾಪ್ತಿಯನ್ನು ವಿಸ್ತರಿಸಿದ್ದು, ಸಹಕಾರಿ ಸಂಸ್ಥೆಗಳ ಮೂಲಕ ಸಾಮಾನ್ಯ ವ್ಯಕ್ತಿಯು ಕೂಡ ಸುಲಭವಾಗಿ ತನ್ನ ಅವಶ್ಯಕತೆಗೆ ಅನುಗುಣವಾಗಿ ಸಾಲ ಸೌಲಭ್ಯವನ್ನು ಪಡೆದು, ಅ ಮೂಲಕ ತನ್ನ ಜೀವನವನ್ನು ರೂಪಿಸಿಕೊಳ್ಳುವ ಹಾಗೂ ತನ್ನ ಸಮಸ್ಯೆಗಳನ್ನು ಈಡೇರಿಸಿಕೊಳ್ಳಲು ಸಹಕಾರ ಕ್ಷೇತ್ರ ತನ್ನದೇ ಆದಂತಹ ಕೊಡುಗೆಯನ್ನು ನೀಡುತ್ತಾ ಬಂದಿದೆ ಎಂದು ತಿಳಿಸಿದರು. ಆದ್ದರಿಂದ ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ಜಾತಿ, ಮತ, ಧರ್ಮ ಎಂಬ ಯಾವುದೇ ಬೇದವಿಲ್ಲದೇ ಸಹಕಾರಿ ಕ್ಷೇತ್ರದಲ್ಲಿ ಪಾಲ್ಗೊಳ್ಳಬೇಕೆಂದು ಸಹಕಾರಿ ಬಂಧುಗಳಿಗೆ ಕರೆ ನೀಡಿದರು.

ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಸಲೀಮೋದ್ದಿನ್, ಅಧ್ಯಕ್ಷರು, ಬೀದರ ಪಟ್ಟಣ ಸಹಕಾರಿ ಬ್ಯಾಂಕ್ ನಿ., ಬೀದರ ಹಾಗೂ ಶ್ರೀ ಸಂಜೀವ ಕುಮಾರ್ ಪಾಟೀಲ್, ಉಪಾಧ್ಯಕ್ಷರು, ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಇವರು ವೇದಿಕೆಯಲ್ಲಿದ್ದರು.

ನಂತರ ಉಪನ್ಯಾಸ ಕಾರ್ಯಕ್ರಮದಲ್ಲಿ ಮೊದಲಿಗೆ 'ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ, ಸೌಹಾರ್ದ ಸಹಕಾರಿ ಚಳುವಳಿಯ ಪ್ರಗತಿ ಹಾಗೂ ಸಾಧನೆಗಳು, ಸೌಹಾರ್ದ ಸಹಕಾರಿ ಕಾಯ್ದೆ ಮತ್ತು ಸಹಕಾರ ಸಂಘಗಳ ಕಾಯ್ದೆಯ ನಡುವಿನ ವ್ಯತ್ಯಾಸಗಳು, ಹೊಸದಾಗಿ ಸೌಹಾರ್ದ ಸಹಕಾರಿಯನ್ನು ರಚನೆ ಮಾಡುವ ವಿಧಾನ ಹಾಗೂ 1959ರ ಸಹಕಾರ ಸಂಘಗಳ ಕಾಯ್ದೆಯಿಂದ 1997ರ ಸೌಹಾರ್ದ ಸಹಕಾರ ಕಾಯ್ದೆಗೆ ಪರಿವರ್ತನೆಗೊಳ್ಳುವ ಕ್ರಮಗಳು' ಎಂಬ ವಿಷಯದ ಬಗ್ಗೆ ಸಂಯುಕ್ತ ಸಹಕಾರಿಯ ಶ್ರೀ ವೈ. ಕುಮಾರ, ಉಪ ಪ್ರಧಾನ ವ್ಯವಸ್ಥಾಪಕರು, ಇವರು ಉಪನ್ಯಾಸವನ್ನು ನೀಡಿದರು. ನಂತರ ಮಧ್ಯಾಹ್ನದ ಅವಧಿಯಲ್ಲಿ 'ಸಹಕಾರ ಕ್ಷೇತ್ರದ ಸಾಧನೆ, ಸವಾಲುಗಳು ಹಾಗೂ ಅವಕಾಶಗಳು, ನಿರ್ದೇಶಕರ ಹಾಗೂ ಸದಸ್ಯರ ಹಕ್ಕು ಕರ್ತವ್ಯ ಹಾಗೂ ಜವಾಬ್ದಾರಿಗಳು ಮತ್ತು ಸಹಕಾರಿ ನಾಯಕತ್ವದ ಗುಣಲಕ್ಷಣಗಳು' ಎಂಬ ವಿಷಯದ ಬಗ್ಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಉಪನ್ಯಾಸವನ್ನು ನೀಡಿದರು.

ಈ ಕಾರ್ಯಕ್ರಮದಲ್ಲಿ ಬೀದರ್ ಜಿಲ್ಲೆಗಳ 9 ಸಹಕಾರ ಸಂಘಗಳಿಂದ 11 ಜನ ಪ್ರತಿನಿಧಿಗಳು ಮತ್ತು 28 ಸೌಹಾರ್ದ ಸಹಕಾರಿಗಳಿಂದ 42 ಜನ ಪ್ರತಿನಿಧಿಗಳು ಭಾಗವಹಿಸಿ ತರಬೇತಿ ಕಾರ್ಯಕ್ರಮದ ಪ್ರಯೋಜನವನ್ನು ಪಡೆದುಕೊಂಡರು. ■

### ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆ ನೋಂದಣೆ ದಿನಾಂಕ ವಿಸ್ತರಣೆ

ಈ ಯೋಜನೆಯಡಿಯಲ್ಲಿ ಹೆಸರು ನೊಂದಾಯಿಸಲು ನಿಗದಿಪಡಿಸಿದ ದಿನಾಂಕವನ್ನು 16-8-2014ರವರೆಗೆ ವಿಸ್ತರಿಸಲಾಗಿದೆಯೆಂದು ಸರಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಗುಲಬರ್ಗಾದಲ್ಲಿ ಸಿರಿ ಸಮೃದ್ಧಿ ಸೌಹಾರ್ದ ಸಹಕಾರಿ ನಿ., ಉದ್ಘಾಟನೆ





ದಿನಾಂಕ : 16–07–2014 ರಂದು ಗುಲಬರ್ಗಾ ನಗರದ ಹೆಚ್.ಕೆ.ಸಿ.ಸಿ. ಸಭಾಂಗಣದಲ್ಲಿ ಬೆಳಗ್ಗೆ 11.00 ಗಂಟೆಗೆ ಜರುಗಿದ ನೂತನ ಸೌಹಾರ್ದ ಸಹಕಾರಿಯಾದ "ಸಿರಿ ಸಮೃದ್ಧಿ ಸೌಹಾರ್ದ ಪತ್ತಿನ ಸಹಕಾರಿ ನಿ., ಗುಲಬರ್ಗಾ" ಇದರ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ರವರು ಉದ್ಘಾಟಿಸಿದರು. ಶ್ರೀ ಗುರುನಾಥ ಜಾಂತಿಕರರವರು ತಮ್ಮ ಉದ್ಘಾಟನಾ ಭಾಷಣದಲ್ಲಿ "ಸಹಕಾರ ಕ್ಷೇತ್ರದಲ್ಲಿ ಮೀಸಲಾತಿಗೆ ಮುಂದಾಗಿರುವ ರಾಜ್ಯ ಸರ್ಕಾರದ ಕ್ರಮ ಸರಿಯಲ್ಲ. ಸರ್ಕಾರದ ಈ ನೀತಿಯಿಂದ ಸಹಕಾರಿ ಕ್ಷೇತ್ರದ ಮೇಲೆ ಮಾರಕ ಪರಿಣಾಮ ಬೀರಲಿದೆ." ಎಂದು ಅಸಮಾಧಾನ ವ್ಯಕ್ತಪಡಿಸಿ, "ವಿದೇಶಿ ಬ್ಯಾಂಕುಗಳ ಹಾವಳಿ ತಡೆಗಟ್ಟಬೇಕಾದರೆ ಸಹಕಾರಿ ಬ್ಯಾಂಕುಗಳು ಹೆಚ್ಚು ಸ್ಥಾಪನೆಯಾಗಬೇಕು ಎಂದರು.

ಸಹಕಾರಿ ಸಂಸ್ಥೆಗಳು ನಿಷ್ಠೆ, ಪ್ರಮಾಣಿಕತನದಿಂದ ಸಹಕಾರಿಗಳ ಸದಸ್ಯರುಗಳಿಗೆ ಸೇವೆ ನೀಡಿದರೆ ಉತ್ತಮ ರೀತಿಯಲ್ಲಿ ಬೆಳವಣಿಗೆ ಹೊಂದಲು ಸಾಧ್ಯ. ಸಹಕಾರಿಗಳು ಬಡ ಜನರಿಗೆ ಸಾಲ ನೀಡುವ ಮೂಲಕ ಆರ್ಥಿಕತೆ ಸಬಲೀಕರಣಕ್ಕೆ ಶ್ರಮಿಸಬೇಕು" ಎಂದು ಸಲಹೆ ನೀಡಿದರು.

ಉದ್ಘಾಟಣೆ ಕಾರ್ಯಕ್ರಮದಲ್ಲಿ ಹೆಚ್.ಕೆ.ಸಿ.ಸಿಐ ನ ಅಧ್ಯಕ್ಷರಾದ ಶ್ರೀ ರಾಧಾಕೃಷ್ಣ ರಘೋಜಿ ಮತ್ತು ಸಂಯುಕ್ತ ಸಹಕಾರಿಯ ಗುಲಬರ್ಗಾ ವಿಭಾಗೀಯ ಅಧಿಕಾರಿಯಾದ ಶ್ರೀ ಸಂಜಯ ಕೋರಟಕರರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀಮತಿ ಅರುಣಾ ಸಿ. ಪಾಟೀಲ್ (ಮಾಜಿ ಶಾಸಕರು–ಗುಲಬರ್ಗಾ) ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಿರಿ ಸಮೃದ್ಧಿಯ ಅಧ್ಯಕ್ಷ ಜಯಂತ ಖಣಗೆ, ಉಪಾಧ್ಯಕ್ಷ ಶ್ರೀಧರ ಸರಾಫ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಅಭಯಕುಮಾರ, ನಿರ್ದೇಶಕರಾದ ಶ್ರೀಮತಿ ರೋಹಿಣಿ ಅಗ್ನಿಹೋತ್ರಿ, ಸಿದ್ರಾಮಪ್ಪ ಶೆಟ್ಟಿ ಹಾಜರಿದ್ದರು.

## ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 9ನೇ ವಾರ್ಷಿಕ ಸರ್ವ ಸದಸ್ಯರ ಸಭೆ



ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 9ನೇ ವಾರ್ಷಿಕ ಸರ್ವ ಸದಸ್ಯರ ಸಭೆಯು ದಿನಾಂಕ20.07.2014ರಂದು ನಡೆಯಿತು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಶಿವಮೊಗ್ಗ ಜಿಲ್ಲಾ ನಿರ್ದೇಶಕ ಶ್ರೀ ರವಿಕುಮಾರ ರವರು ಜ್ಯೋತಿ ಬೆಳಗಿಸುವುದರೊಡನೆ ಸಭೆ ಪ್ರಾರಂಭವಾಯಿತು. ಉತ್ತಮ ಶಾಖೆ ಎಂದು ಎರಡು ಶಾಖೆಗಳಿಗೆ ರೋಲಿಂಗ್ ಶೀಲ್ಡ ಹಾಗೂ ಪ್ರಶಸ್ತಿ ಪತ್ರ ನೀಡಿ ನಂತರ ಉತ್ತಮ ನೌಕರರ ಎಂದು ಪರಿಗಣಿಸಿ 7 ಜನ ನೌಕರರಿಗೆ ನಗದು ಹಾಗೂ ಅಭಿನಂದನಾ ಪತ್ರ ನೀಡಲಾಯಿತು.

ಷೇರುದಾರ ಸದಸ್ಯರಲ್ಲಿ ಸಮಾಜ ಸೇವೆಗಾಗಿ 'ಆರ್ಯಭಟ' ಪ್ರಶಸ್ತಿ ಪಡೆದ ನಿರ್ದೇಶಕ ಶ್ರೀ ದಿನೇಶ್ ಕುಮಾರ್ ರವರಿಗೂ, ರಾಜ್ಯ ಮಟ್ಟದ ಕೃಷಿ ಮಾರುಕಟ್ಟೆ ಸಮಿತಿಗೆ ಶಿವಮೊಗ್ಗ ಜಿಲ್ಲೆಯಿಂದ ಅವಿರೋಧ ಆಯ್ಕೆಯಾದ ಶ್ರೀ ಜಿ.ಎಸ್. ನಾರಾಯಣ ರಾವ್ ಇವರಿಗೂ ಮತ್ತು ಮಣಿಪಾಲ್ ಆರೋಗ್ಯ ಕಾರ್ಡ ಪ್ರಧಾನ ಪ್ರತಿನಿಧಿ, ಸಾಹಸ ಸಮಿತಿಯ ಅಧ್ಯಕ್ಷರು ಆದ ಶ್ರೀ ಆ.ನಾ. ವಿಜೇಂದ್ರರಾವ್ ರವರಿಗೂ, ಸಂಸ್ಥೆ ವತಿಯಿಂದ ಫಲತಾಂಬೂಲ, ಶಾಲು ಹೊದಿಸಿ ಅಭಿನಂದಿಸಲಾಯಿತು.

# ವಿವಿಧ ಸಹಕಾರಿಗಳಲ್ಲಿ ಇ-ಸ್ಟಾಂಪಿಂಗ್ ಸೇವೆ ಉದ್ಘಾಟನೆ

## ದೇವಲ ಗಾಣಗಾಪೂರದ ಶ್ರೀ ನಿರ್ಗುಣದತ್ತ ಸೌಹಾರ್ದ ಪತ್ತಿನ ಸಹಕಾರಿ



ದಿನಾಂಕ : 23 –07–2014 ರಂದು ಗುಲಬರ್ಗಾ ಜಿಲ್ಲೆ ಅಫಜಲಪೂರ ತಾಲೂಕಿನ ದೇವಲ ಗಾಣಗಾಪೂರದ ಶ್ರೀ ನಿರ್ಗುಣ ದತ್ತ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದಲ್ಲಿ ಇ-ಸ್ಟಾಂಪಿಂಗ್ ಕೇಂದ್ರದ ಉದ್ಘಾಟನೆಯನ್ನು ಸೌಹಾರ್ದ ಸಹಕಾರಿಯ ಗುಲಬರ್ಗಾ ವಿಭಾಗಾಧಿಕಾರಿಗಳಾದ ಶ್ರೀ ಸಂಜಯ ಕೋರಟಕರ ನೆರವೇರಿಸಿದರು. ಈ ಸಂದರ್ಭದಲ್ಲಿ ಸ್ಥಳಿಯ ಗ್ರಾಮ ಪಂಚಾಯತ ಅಧ್ಯಕ್ಷರಾದ ಶ್ರೀ ಅಣ್ಣಪ್ಪ ಭಜಂತ್ರಿ, ಗ್ರಾಮದ ಹಿರಿಯರಾದ ಶ್ರೀ ಶಿವದತ್ತ ಮಹಾರಾಜರು, ಶ್ರೀ ಮಾರುತಿ ದೇವರಮನಿ, ಡಾ॥ ಆರ್. ಎಸ್. ಕುಲಕರ್ಣಿ, ಶ್ರೀ ಶಿವಪ್ಪ ವಡಗೇರಿ, ಸಹಕಾರಿಯ ಅಧ್ಯಕ್ಷರಾದ ಭೀಮರಡ್ಡಿ ಮಾಲಿಪಾಟೀಲ, ಉಪಾಧ್ಯಕ್ಷರಾದ ಶ್ರೀ ರಾಕೇಶ ವಡಗೇರಿ, ನಿರ್ದೇಶಕರುಗಳಾದ ಶ್ರೀ ಶ್ರೀಪಾದ ನರೂಟೆ, ಶ್ರೀ ಸಿದ್ದಪ್ಪ ಡಾಂಗೆ, ಶ್ರೀ ಭಾಗಣ್ಣ ಮೈನಾಳ ಹಾಗೂ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಹ ಶ್ರೀ ಶ್ರೀಪಾದ ಮಾಳಗೆ ಹಾಜರಿದ್ದರು.

ಶ್ರೀ ನಿರ್ಗುಣ ದತ್ತ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿಯವರು ಪೂಜ್ಯರಿಗೆ ಹಾಗೂ ಗುಲಬರ್ಗಾ ವಿಭಾಗೀಯ ಅಧಿಕಾರಿಗಳಿಗೆ ಸನ್ಮಾನಿಸಿದರು.

## ಜೇವರ್ಗಿ ಪತ್ತಿನ ಸಹಕಾರಿ ನಿಯಮಿತ

ದಿನಾಂಕ : 04.07.2014 ರಂದು ಜೇವರ್ಗಿ ಪತ್ತಿನ ಸಹಕಾರಿ ನಿಯಮಿತ, ಗುಲಬರ್ಗಾ ಇದರ ಇ-ಸ್ಟಾಂಪಿಂಗ್ ಸೇವಾ ಕೇಂದ್ರದ ಉದ್ಘಾಟಣೆಯನ್ನು ಶ್ರೀ ಶ್ರೀ ಶ್ರೀ ನಿತ್ಯಾನಂದ ಮಹಾರಾಜರು, ರಾಮಪೂರೆ, ಇವರ ದಿವ್ಯ ಸಾನಿಧ್ಯದಲ್ಲಿ ಗುಲಬರ್ಗಾ ವಿಭಾಗೀಯ ಅಧಿಕಾರಿಗಳಾದ ಶ್ರೀಯುತ ಸಂಜಯ ಕೋರಟಕರ ಇವರು ನೇರವೆರಿಸಿದರು. ಈ ಉದ್ಘಾಟಣೆ ಕಾರ್ಯಕ್ರಮದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಬಸವರಾಜ ಪಾಟೀಲ್ ಹಾಗೂ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರಾದ ಶ್ರೀ ಪಿತಾಂಬರಾವ್ ಪಾಟೀಲ್, ವಿಜಯ ಕುಮಾರ ದುದ್ದಗಿ ಹಾಗೂ ಇನ್ನಿತರರು ಹಾಜರಿದ್ದರು. ವಿಭಾಗೀಯ ಅಧಿಕಾರಿಗಳು ಗ್ರಾಹಕರಿಗೆ ಇ-ಸ್ಟಾಂಪಿಂಗ್ ಛಾಪಾ ಕಾಗದವನ್ನು ವಿತರಿಸುವ ಮೂಲಕ ಇ-ಸ್ಟಾಂಪಿಂಗ್ ಸೇವೆಗೆ ಚಾಲನೆ ನೀಡಿದರು. ಜೇವರ್ಗಿ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿಯವರು ಪೂಜ್ಯರಿಗೆ ಹಾಗೂ ಗುಲಬರ್ಗಾ ವಿಭಾಗೀಯ ಅಧಿಕಾರಿಗಳಿಗೆ ಸನ್ಮಾನಿಸಿದರು.



## ಶ್ರೀ ಬುದ್ಧ ಬಸವ, ಅಂಬೇಡ್ಕರ್, ಪರಿಶಿಷ್ಟ ಜಾತಿ/ಪರಿಶಿಷ್ಠ ಪಂಗಡದ ವಿವಿದೋದ್ಧೇಶಗಳ ಸೌಹಾರ್ದ ಸಹಕಾರಿ



ಶ್ರೀ ಬುದ್ಧ ಬಸವ, ಅಂಬೇಡ್ಕರ್, ಪರಿಶಿಷ್ಟ ಜಾತಿ/ಪರಿಶಿಷ್ಠ ಪಂಗಡದ ವಿವಿದೋದ್ಧೇಶಗಳ ಸೌಹಾರ್ದ ಸಹಕಾರಿ ನಿಯಮಿತ ಹುಕ್ಕೇರಿ ಇದರ ಇ-ಸ್ಟಾಂಪಿಂಗ್ ಸೇವಾ ಕೇಂದ್ರವನ್ನು ದಿನಾಂಕ 05.07.2014 ರಂದು ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಸತೀಶಜಾರಕಿಹೊಳಿ ಯವರು ಉದ್ಘಾಟಿಸಿದರು.

# ಗುಲಬರ್ಗಾ ನಗರದ ಸೌಹಾರ್ದ ಸಹಕಾರಿಗಳಿಗೆ ಭೇಟಿ





ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಹಾಗೂ ಗುಲಬರ್ಗಾ ವಿಭಾಗೀಯ ಅಧಿಕಾರಿ ಶ್ರೀ ಸಂಜಯ ಕೋರಟಕರ ಅವರುಗಳು ಮೇಲಿನ ಚಿತ್ರದಲ್ಲಿ ಕಮಲಾಪೂರ ಪತ್ತಿನ ಸೌಹಾರ್ದ ಸಹಕಾರಿಗೆ ಭೇಟಿ ನೀಡಿದ ಸಂದರ್ಭ, ಮೇಲಿನ ಎಡ ಚಿತ್ರದಲ್ಲಿ ಶ್ರೀ ಅಭಿನವ ಸಿದ್ದಲಿಂಗ ಪತ್ತಿನ ಸೌಹಾರ್ದ ಸಹಕಾರಿಗೆ ಭೇಟಿ ನೀಡಿದ ಸಂದರ್ಭ. ಮೇಲಿನ ಬಲ ಚಿತ್ರದಲ್ಲಿ ಅರ್ಥ ಪತ್ತಿನ ಸೌಹಾರ್ದ ಸಹಕಾರಿಗೆ ಭೇಟಿ ನೀಡಿದ ಸಂದರ್ಭ.



# ಮಾಂಜರಿಯ ಶ್ರೀ ಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ. ಮುಖ್ಯ ಕಛೇರಿಯ ಉದ್ಘಾಟನೆ



ಶ್ರೀ ಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ. ಮಾಂಜರಿ ಇದರ ಮುಖ್ಯ ಕಛೇರಿಯ ಉದ್ಘಾಟನಾ ಸಮಾರಂಭಕ್ಕೆ ಉದ್ಘಾಟಕರಾಗಿ ಡಾ. ಡಿ. ವೀರೇಂದ್ರ ಹೆಗ್ಗಡೆ ಧರ್ಮಾಧಿಕಾರಿ ಶ್ರೀ ಕ್ಷೇತ್ರ ಧರ್ಮಸ್ಥಳ ಹಾಗೂ ದಿವ್ಯ ಸಾನಿಧ್ಯವನ್ನೂ ಶ್ರೀ ಮ.ನಿ.ಪ್ರ. ಅಲ್ಲಮಪ್ರಭು ಮಹಾಸ್ವಾಮಿಗಳು ಸಿದ್ಧ ಸಂಸ್ಥಾನ ಮಠ ಚಿಂಚಣಿ ಮತ್ತು ಸ್ವಸ್ತಿಶ್ರೀ ಜೀನಸೇನ ಭಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮಿಜಿ ನಾಂದನಿ ಮಠ ಇವರು ವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷರಾಗಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ.ಪಿ. ಮಗೆಣ್ಣವರ, ಮಾಜಿ ಶಾಸಕರು ವಹಿಸಿದ್ದರು.

ಸಹಕಾರಿಯ ಲಿಫ್ಟ್ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದರ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ್, ಗಣಕಯಂತ್ರ ಉದ್ಘಾಟನೆಯನ್ನು, ಶ್ರೀ ಮೋಹನ ಶಹಾ, ಮಾಜಿ ಶಾಸಕರು, ಶ್ರೀ ಪ್ರಕಾಶ ಹುಕ್ಕೇರಿ, ಸಂಸದರು ಚಿಕ್ಕೋಡಿ, ಶ್ರೀ ರಾವಸಾಹೇಬ ಅ. ಪಾಟೀಲ, ಸಂಸ್ಥಾಪಕರು ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಬೋರಗಾಂವ ಹಾಗೂ ನಿರ್ದೇಶಕರು ಸಂಯುಕ್ತ ಸಹಕಾರಿ ಬೆಂಗಳೂರು, ಶ್ರೀ ಶ್ರೀಕಾಂತ ಹತನೂರೆ, ನಿರ್ದೇಶಕರು ಸಂಯುಕ್ತ ಸಹಕಾರಿ ಬೆಂಗಳೂರು, ಇವರಗಳ ಹಸ್ತದಿಂದ ದ್ವೀಪ ಪ್ರಜ್ವಲನೆ ಮಾಡಿಸಲಾಯಿತು.



ಶ್ರೀ ವಿಠ್ಠಲ್ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ಸಹಕಾರಿಯ 10ನೇ ವರ್ಷದ ಸರ್ವಸದಸ್ಯರ ಹಾಗೂ ದಶಮಾನೋತ್ಸವ ಕಾರ್ಯಕ್ರಮವು ದಿನಾಂಕ : 19.07.2014ರಂದು ಸೇಕ್ರೇಡ್ ಹಾರ್ಟ್ ಸಮುದಾಯ ಭವನದಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ್‌ರವರು ಹಾಗೂ ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಸಹಕಾರಿಯ ಅಧ್ಯಕ್ಷರಾದ ಶ್ರೀ ಎನ್.ಎಸ್.ಜಯಕುಮಾರ್‌ರವರು ಶ್ರೀ ವಿಠ್ಠಲ್ ಸೌಹಾರ್ದ ಸಹಕಾರಿ ನಿ. ಅಧ್ಯಕ್ಷರಾದ ಶ್ರೀ ಎನ್.ಎನ್.ಸುರೇಶ್‌ರವರು, ಹಿರಿಯ ಸಹಕಾರಿಗಳಾದ ಶ್ರೀ ಟಿ.ಆರ್.ನಾರಾಯಣರಾವ್, ಶ್ರೀ ಪಿ.ಎಲ್. ನಾರಾಯಣರಾವ್, ಶ್ರೀ ಕೆ.ಶಿವನಂಜಪ್ಪ, ಶ್ರೀ ಜಗದೀಶಪ್ಪ, ಶ್ರೀ ದೇವರಾಜು, ಶ್ರೀ ಬಿ.ಎಸ್.ರಮೇಶ್ ಸಂಯುಕ್ತ ಸಹಕಾರಿಯ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್ ಕೆ. ಸಮಾರಂಭದಲ್ಲಿ ಭಾಗವಹಿಸಿದ್ದರು.



ಸಿದ್ಧಸಿರಿ ಸೌಹಾರ್ದ ಸಹಕಾರಿ ನಿಯಮಿತ ಬಿಜಾಪುರ ಸಹಕಾರಿಯು ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ಯೋಜನೆ ಅಡಿಯಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸವಗೌಡ ಆರ್. ಪಾಟೀಲ್ ಯತ್ನಾಳರವರು ಯೋಜನೆಯ ಫಲಾನುಭವಿಗಳಿಗೆ ಯೋಜನೆಯ ಗುರುತಿನ ಕಾರ್ಡ್‌ಗಳನ್ನು ವಿತರಿಸಿದರು. ಸಭೆಯಲ್ಲಿ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರಾದ ಶ್ರೀ ಸಂಗಣಬಸಪ್ಪಾ ಜಿ. ಸಜ್ಜನ, ಶ್ರೀ ಬಸಯ್ಯಾ ಎಸ್. ಹಿರೇಮಠ,ಶ್ರೀ ಜಗದೇಶ ಸಿ.ಕ್ಷೇತ್ರಿ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶಂಕರಗೌಡ ಎಸ್.ಪಾಟೀಲ್ ಮತ್ತು ಸಿಬ್ಬಂದಿಗಳಾದ ಶ್ರೀ ರಾಜಶೇಖರ್ ಗಿ. ಸ್ವಾಮಿ ಹಾಗೂ ಶ್ರೀ ಬಸವರಾಜ ಮರಣ್ಣೂರು ಇವರುಗಳು ಹಾಜರಿದ್ದರು.

### ವೈಭವ ಲಕ್ಷ್ಮೀ ಮಹಿಳಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ



**ಶ್ರೀಮತಿ ಬಸಮ್ಮ ಬಸವರಾಜ ಜಮಾದಾರ, ಅಧ್ಯಕ್ಷರು.**



**ಶ್ರೀಮತಿ ದ್ರಾಕ್ಷಾಯಣಿ ತಿಪ್ಪಣ್ಣ ತಳವಾರ, ಉಪಾಧ್ಯಕ್ಷರು**

## ಸಹಕಾರಿಗಳ ಮಹಿಳಾ ನಿರ್ದೇಶಕರುಗಳಿಗಾಗಿ 2 ದಿನಗಳ "ವೃತ್ತಿ ಪರಿಣಿತಿ" ತರಬೇತಿ ಕಾರ್ಯಕ್ರಮ

ರಾಜ್ಯದ ಸೌಹಾರ್ದ ಸಹಕಾರಿಗಳ ಹಾಗೂ ಮಹಿಳಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ನಿರ್ದೇಶಕರುಗಳಿಗಾಗಿ ಬೆಂಗಳೂರಿನ ಪದ್ಮನಾಭನಗರದಲ್ಲಿರುವ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ 2 ದಿನಗಳ "ವೃತ್ತಿ ಪರಿಣಿತಿ" ತರಬೇತಿ ಕಾರ್ಯಕ್ರಮವನ್ನು 5–6–ನೇ ಸೆಪ್ಟೆಂಬರ್ 2014ರಂದು ಏರ್ಪಡಿಸಲಾಗಿದೆ.

ಊಟ, ಉಪಾಹಾರ, ವಸತಿ, ಅಧ್ಯಯನ ಸಾಹಿತ್ಯವನ್ನು ಸಂಯುಕ್ತ ಸಹಕಾರಿಯು ವ್ಯವಸ್ಥೆಮಾಡುತ್ತದೆ. 50 ಮಹಿಳಾ ಸಹಕಾರಿಗಳಿಗೆ ಮಾತ್ರ. ತರಬೇತಿಗೆ ಪ್ರವೇಶ. ಪ್ರವೇಶ ಶುಲ್ಕ ರೂ. 1000/–ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 20–8–2014.

## ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಮಾಜದ ಕನಿಷ್ಟ ವ್ಯಕ್ತಿಯ ಸೇವೆಯ ಅವಕಾಶ - ಶ್ರೀಮತಿ ದೀಪಾ ಜಾರ್ಜ್

ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ ದಿನಾಂಕ 21-7-2014 ರಿಂದ 27-7-2014 ರವರೆಗೆ 7 ದಿನಗಳ ಓರಿಯಂಟೇಶನ್ ತರಬೇತಿ ಕಾರ್ಯಕ್ರಮವನ್ನು ಬೆಂಗಳೂರಿನ ಪ್ರಾದೇಶಿಕ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

ದಿನಾಂಕ : 21-7-2014 ರಂದು ಆರ್.ಬಿ.ಐ.ನ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ದೀಪಾ ಜಾರ್ಜ್‌ರವರು ಉದ್ಘಾಟಿಸಿ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ ಈ ರೀತಿಯ ತರಬೇತಿ ಕಾರ್ಯಕ್ರಮಗಳು ಅಗತ್ಯವಾಗಿವೆ. ಬ್ಯಾಂಕಿನ ಸಿಬ್ಬಂದಿಯವರಿಗೆ ಬ್ಯಾಂಕಿಂಗ್ ಕ್ಷೇತ್ರದ ವಿವಿಧ ಆಯಾಮಗಳ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡುವುದು ಅಗತ್ಯ. ಈ 7 ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ಉತ್ತಮ ವಿಷಯಗಳನ್ನು ಆಯ್ಕೆ ಮಾಡಲಾಗಿದೆ, ಇದರ ಉತ್ತಮ ಪ್ರಯೋಜನ ಪಡೆದುಕೊಳ್ಳುವಂತೆ ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರರವರು ಮಾತನಾಡಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ 18 ಬ್ಯಾಂಕುಗಳಿವೆ ಹಾಗೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ ಪ್ರಪ್ರಥಮ ಬಾರಿಗೆ ಸಂಯುಕ್ತ ಸಹಕಾರಿಯ ವತಿಯಿಂದ 7 ದಿನಗಳ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಕಾರ್ಯಕ್ರಮವನ್ನು ಸೌಹಾರ್ದ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರುಗಳ ಸಭೆಯ ನಿರ್ಣಯದ ಆಧಾರದ ಮೇಲೆ ಅವರೊಂದಿಗೆ ಹಾಗೂ



ಕಾರ್ಯಕ್ರಮದ ಉದ್ಘಾಟನೆಯಲ್ಲಿ ಗಣ್ಯರು

ಸಂಪನ್ಮೂಲ ವ್ಯಕ್ತಿಗಳೊಡನೆ ಸಮಾಲೋಚಿಸಿ ಯೋಜಿಸಲಾಗಿದೆ. ಈ ಕಾರ್ಯಕ್ರಮದ ಪ್ರಯೋಜನವನ್ನು ಸಿಬ್ಬಂದಿಯವರು ಪೂರ್ಣವಾಗಿ ಪಡೆಯಬೇಕು ಎಂದು ತಿಳಿಸಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಆರ್.ಎನ್.ದೇಶಪಾಂಡೆ, ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕ ಶ್ರೀ ವಸಂತ ನಾಯ್ಕ, ಉಪನ್ಯಾಸಕಿ ಶ್ರೀಮತಿ ಹೋಮಿಗಾ, ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಯು.ಪಿ.ಪುರಾಣಿಕ, ಶ್ರೀ ಬಿ.ಎನ್.ಸಂಪತಕುಮಾರರವರು ಭಾಗವಹಿಸಿದ್ದರು. ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡಪಾಟೀಲ್‌ರವರು ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣ ಮಾಡಿದರು. ಉಪಪ್ರಧಾನ ವ್ಯವಸ್ಥಾಪಕ ಶ್ರೀ ಕುಮಾರರವರು ವಂದಿಸಿದರು. ಕಾರ್ಯಕ್ರಮದ ಅವಧಿಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಯವರು ಹೊಂದಲೇಬೇಕಾದ ಬ್ಯಾಂಕಿಂಗ್ ಸಂಬಂಧಿಸಿದ ವಿಷಯಗಳನ್ನು ಅಳವಡಿಸಿ ಉತ್ತಮ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಏರ್ಪಡಿಸಲಾಗಿತ್ತು.

## ಪಟ್ಟಣ ಸಹಕಾರ ಬ್ಯಾಂಕುಗಳಿಗೆ ವಾಣಿಜ್ಯ ಬ್ಯಾಂಕುಗಳಿಗಿಂತ ಹೆಚ್ಚು ಸೇವಾ ಅವಕಾಶ - ಶ್ರೀ ಹರಿಹರ ಮಿಶ್ರಾ

ದಿನಾಂಕ : 27/7/2014ರಂದು ನಡೆದ ಸಮಾರೋಪ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ರಿಸರ್ವ ಬ್ಯಾಂಕ್ ಆಫ್ ಇಂಡಿಯಾದ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಜನರಲ್ ಮ್ಯಾನೇಜರ್ ಶ್ರೀ ಹರಿಹರ ಮಿಶ್ರಾರವರು ಮಾತನಾಡಿ ಇದೊಂದು ಉತ್ತಮ ತರಬೇತಿ ಕಾರ್ಯಕ್ರಮವಾಗಿದೆ. ವಿಷಯಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳು ಮತ್ತು ತರಬೇತಿ ಅವಧಿಯ ಇತರೆ ಚಟುವಟಿಕೆಗಳು ಅತ್ಯಂತ ಮಹತ್ವದ್ದು ಹಾಗೂ ಉತ್ತಮವಾಗಿವೆ. ಪಟ್ಟಣ ಸಹಕಾರ ಬ್ಯಾಂಕುಗಳಿಗೆ ವಾಣಿಜ್ಯ ಬ್ಯಾಂಕುಗಳಿಗಿಂತಲೂ ಉತ್ತಮ ಸೇವೆ ಸಲ್ಲಿಸುವ ಅವಕಾಶಗಳಿವೆ.



ಅವುಗಳು ಉತ್ತಮ ಸಿಬ್ಬಂದಿಯನ್ನು ಹೊಂದಿದಾಗ ಮಾತ್ರ ಇದು ಯಶಸ್ವಿಯಾಗಬಲ್ಲದು ಎಂದು ತಿಳಿಸಿದರು.

## ತರಬೇತಿ ಗುಣಮಟ್ಟದ್ದಾಗಿತ್ತು – ಶ್ರೀ ಮನೋಹರ ಮಸ್ಕಿ

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಸುಕೋ ಬ್ಯಾಂಕಿನ ಅಧ್ಯಕ್ಷ ಹಾಗೂ ಸಂಯುಕ್ತ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಶ್ರೀ ಮನೋಹರ ಮಸ್ಕಿಯವರು ತರಬೇತಿ ಪಡೆದ ಸಿಬ್ಬಂದಿಯವರು ಬ್ಯಾಂಕಿಂಗ್ ವಿಷಯಗಳನ್ನು ಕರಗತಮಾಡಿಕೊಳ್ಳುವುದು ಅವಶ್ಯಕ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೊಸ ಹೊಸ ವಿಚಾರಗಳು ಬರುತ್ತಲೇ ಇರುತ್ತವೆ ಎಂದರು.



ಕಾರ್ಯಕ್ರಮದಲ್ಲಿ ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಹಾಗೂ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷ ಶ್ರೀ ವಿಶ್ವನಾಥ ಹಿರೇಮಠ, ಶುಶ್ರೂತಿ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಶ್ರೀ ಶ್ರೀನಿವಾಸಮೂರ್ತಿಯವರು ಮಾತನಾಡಿದರು. ಸಿ.ಬಿ.ಎಸ್.ಸಹಕಾರ ಬ್ಯಾಂಕಿನ ಅಧ್ಯಕ್ಷ ಶ್ರೀ ಮಂಜುನಾಥ ಸಿದ್ದಾಪುರ, ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕ ಶ್ರೀ ವಸಂತ ನಾಯ್ಕರವರುಗಳು ಉಪಸ್ಥಿತರಿದ್ದರು.

ಎಲ್ಲಾ ಶಿಬಿರಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು. ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ. ಕುಮಾರರವರು ವಂದಿಸಿದರು. ಕಾರ್ಯಕ್ರಮದಲ್ಲಿ 10 ಸೌಹಾರ್ದ ಸಹಕಾರಿ ಬ್ಯಾಂಕುಗಳ 35 ಸಿಬ್ಬಂದಿಯವರು ಸುಕೋ ಬ್ಯಾಂಕಿನ ತಾಂತ್ರಿಕ ನಿರ್ದೇಶಕ ಶ್ರೀ ಮೋಹಿತ ಮಸ್ಕಿ ಹಾಗೂ ಸಂಯುಕ್ತ ಸಹಕಾರಿಯ ಇಬ್ಬರು ಅಧಿಕಾರಿಗಳು ಭಾಗವಹಿಸಿದ್ದರು.

## ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ 7 ದಿನಗಳ ಓರಿಯೆಂಟೇಶನ್ ತರಬೇತಿ



ತರಬೇತಿಯಲ್ಲಿ ಶಿಬಿರಾರ್ಥಿಗಳು



ಯೋಗ ತರಬೇತಿಯಲ್ಲಿ ಶಿಬಿರಾರ್ಥಿಗಳು

### ಮಾಕ್ ಬ್ಯಾಂಕಿಂಗ್ (ಬ್ಯಾಂಕಿಂಗ್ ಪ್ರಾಯೋಗಿಕ) ಮತ್ತು ಪರೀಕ್ಷೆ



(ಮಾಕ್ ಬ್ಯಾಂಕಿಂಗ) ಬ್ಯಾಂಕಿಂಗ ಕ್ಷೇತ್ರದ ಮಹತ್ವದ ಭಾಗವಾಗಿರುವ ವಿವಿಧ ಠೇವಣಿಗಳ ಖಾತೆಗಳನ್ನು ತೆರೆಯುವ ಮತ್ತು ವಿವಿಧ ಸಾಲಗಳನ್ನು ನೀಡುವಾಗ ಅರ್ಜಿಗಳನ್ನು ಭರ್ತಿಮಾಡುವ ಪ್ರಾಯೋಗೀಕಗಳನ್ನು ತಜ್ಞರ ನೆರವಿನಿಂದ ವ್ಯವಸ್ಥೆಮಾಡಲಾಗಿತ್ತು.ಜೊತೆಗೆ ಅವುಗಳನ್ನು ಕಂಪ್ಯೂಟರ್‌ನಲ್ಲಿನ ಸಾಫ್ಟ್‌ವೇರಿನಲ್ಲಿ ಅಳವಡಿಸುವ ಬಗ್ಗೆಯೂ ದಿನಾಂಕ : 26–7–2014 ಮತ್ತು 27–7–2014ರಂದು ಪ್ರಾಯೋಗಿಕಗಳನ್ನು ಏರ್ಪಡಿಸಲಾಗಿತ್ತು. ದಿನಾಂಕ : 27/7/2014 ರಂದು ಪರೀಕ್ಷೆಯನ್ನು ಏರ್ಪಡಿಸಲಾಗಿತ್ತು.



ಮುಕ್ತಾಯ ಸಮಾರಂಭದಲ್ಲಿ ಗಣ್ಯರೊಂದಿಗೆ ಶಿಬಿರಾರ್ಥಿಗಳು



# ಸಹಕಾರಿ ಸಂಸ್ಥೆಗಳಲ್ಲಿ ವೃತ್ತಿಪರತೆಯ ವ್ಯವಹಾರ ಮಾನವ ಸಂಪನ್ಮೂಲ ಹಾಗೂ ಗ್ರಾಹಕರ ಸಂಬಂಧ ನಿರ್ವಹಣೆಯ ಪಾತ್ರ ಮತ್ತು ಮಹತ್ವ

**– ಡಾ॥ ನಂದೀಶ ವಿ. ಹಿರೇಮಠ**
ಹಿರಿಯ ಬೋಧಕರು, ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ತರಬೇತಿ ಸಂಸ್ಥೆ (ಎನ್.ಐ.ಆರ್.ಬಿ) ಬೆಂಗಳೂರು.

1. **ಪ್ರಸ್ತಾವನೆ** : ಸಹಕಾರಿ ಕ್ಷೇತ್ರ ಮಾಡಿದ ಅನೇಕ ಸಾಧನೆಗಳಲ್ಲಿ ಅದು ಹಳ್ಳಿ-ಹಳ್ಳಿಗಳ ಮೂಲೆಗಳನ್ನು ತಲುಪಿ ಸೇವೆ ಒದಗಿಸುತ್ತಿರುವುದು ಶ್ಲಾಘನೀಯ. ಈ ರೀತಿಯ ವಿಶಾಲ ಸಂಪರ್ಕಜಾಲ (Wide reach & Network) ಬಹಳ ಸಂಸ್ಥೆಗಳು ಸಾಧಿಸಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಅದೇ ರೀತಿ ನೀಡುವ ಸೇವೆಗಳ ವಿವಿಧತೆ, ತೀವ್ರಗತಿ ಉತ್ತಮ ಮಟ್ಟದ ಸೇವಾ-ಸೌಲಭ್ಯಗಳು ಬಹಳ ಬದಲಾವಣೆ ಹೊಂದಿದೆ.

ನಮಗೆ ಸಾಕಷ್ಟು ಹೆಮ್ಮೆಪಡುವ ಸಂಗತಿಗಳಿದ್ದರೂ ಕೆಲವು ವಿಷಯಗಳನ್ನು ಗಮನಿಸಿದರೆ ಗಂಭೀರ ಚಿಂತನೆಯ ಅವಶ್ಯಕತೆಯ ಅರಿವು ನಮಗಾಗುತ್ತದೆ. ನಮಗೆ ಸ್ವಾತಂತ್ರ್ಯ ಬಂದಾಗ ಮಾರುಕಟ್ಟೆಯ 80% ವ್ಯವಹಾರವನ್ನು ಸಹಕಾರಿ ಸಂಸ್ಥೆಗಳು ನಿರ್ವಹಿಸುತ್ತಿದ್ದವು, ಅದು ಈಗ 37%ಕ್ಕೆ ಇಳಿದಿದೆ. ಏಕೆಂದರೆ ಸಾಕಷ್ಟು ಪ್ರತಿಸ್ಪರ್ಧಿಗಳು (Competitiors) ಹುಟ್ಟಿಕೊಂಡಿದ್ದಾರೆ.

ನಮ್ಮ ದೇಶದಲ್ಲಿರುವ 50%ಕ್ಕಿಂತ ಹೆಚ್ಚು ಸಹಕಾರಿ ಸಂಸ್ಥೆಗಳು ನಷ್ಟ ಅನುಭವಿಸುತ್ತಿದ್ದು, ಅವುಗಳ ಉಳಿಕೆ ಸಂಶಯಾಸ್ಪದವಾಗಿದೆ. ಅದೇ ರೀತಿ ಬೇಕಾದಷ್ಟು ಮಟ್ಟಿಗೆ ವೃತ್ತಿಪರ ನಿರ್ವಹಣೆ ಈ ಸಂಸ್ಥೆಗಳಲ್ಲಿ ಕಾಣಸಿಗುತ್ತಿಲ್ಲ.

ಇಂತಹ ಜಟಿಲ ಪರಿಸ್ಥಿತಿಯಲ್ಲಿ, ನಾಗಲೋಟದಲ್ಲಿ ಬದಲಾಗುತ್ತಿರುವ ನಮ್ಮ ಸುತ್ತಮುತ್ತಲಿನ ಪರಿಸರ ಅದರಲ್ಲೂ ಬ್ಯಾಂಕಿಂಗ್ ಕ್ಷೇತ್ರವನ್ನು ಗಮನಿಸಿದರೆ, ನಾವು ವೃತ್ತಿಪರ ನಿರ್ವಹಣೆ ಮೊರೆ ಹೋಗಬೇಕಾಗಿರುವುದು ಅನಿವಾರ್ಯವಾಗಿದೆ.

ಒಟ್ಟಿನಲ್ಲಿ, ಸಹಕಾರಿ ಸಂಸ್ಥೆಗಳಿಗೆ ಈಗಿರುವ ಸ್ಪರ್ಧಾತ್ಮಕ ಹಾಗೂ ಜಾಗತೀಕರಣದ ಅಲೆಯಲ್ಲಿ ಉಳಿಯಬೇಕಾದರೆ, ಉಳಿದು ಬೆಳೆಯಬೇಕಾದರೆ, ಬೆಳದು ಅಭಿವೃದ್ಧಿ ಪಥದಲ್ಲಿ ಸಾಗಬೇಕಾದರೆ ವಿವಿಧ ರೀತಿ ವಸ್ತು ಹಾಗೂ ಸೇವೆ (Products & Services) ಗಳನ್ನು ಅತ್ಯುತ್ತಮ ಗಣಮಟ್ಟದಲ್ಲಿ ಮತ್ತು ಒಂದೇ ಸ್ಥಳದಲ್ಲಿ ಲಭ್ಯವಾಗುವಂತೆ ಮಾಡಬೇಕಾಗಿರುವುದು (One stop financial solutions provides) ಅವಶ್ಯಕವಾಗಿದೆ. ಈ ದಿಶೆಯಲ್ಲಿ ಮಾರ್ಪಾಟಾಗಬೇಕಾಗಿರುವುದು (Transformation) ಅತಿ ಮುಖ್ಯವೆನಿಸುತ್ತದೆ.

ಈ ವೃತ್ತಿಪರ ನಿರ್ವಹಣೆಯನ್ನು ವ್ಯವಹಾರ (Bunsiness) ಮಾನವ ಸಂಪನ್ಮೂಲ (Human Resources) ಮತ್ತು ಗ್ರಾಹಕ ಸಂಬಂಧ (Customer Relationship) ಗಳಿಗೆ ಸಂಬಂಧಪಟ್ಟಂತೆ ಈ ಲೇಖನದಲ್ಲಿ ಚರ್ಚಿಸಲಾಗಿದೆ.

2. **ವೃತ್ತಿಪರತೆಯಿಂದ ವ್ಯವಹಾರ ನಿರ್ವಹಣೆ (Professional Business Management) :** ಸಹಕಾರಿ ಸಿದ್ದಾಂತಗಳನ್ನು ಮತ್ತು ತತ್ವಾಧಾರಿತ ವಿಚಾರಧಾರೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಈ ಸಹಕಾರಿ ಸಂಸ್ಥೆಗಳನ್ನು ಹುಟ್ಟು ಹಾಕುವಲ್ಲಿ ವಿವಿಧ ಉದ್ದೇಶಗಳಿದ್ದವು.

ಅವುಗಳಲ್ಲಿ, ಪ್ರಮುಖವಾಗಿ (ಅ) ಖಾಸಗಿ, ಸರಕಾರಿ ಮತ್ತು ಸಾರ್ವಜನಿಕ ಕ್ಷೇತ್ರಗಳನ್ನು ಸರಿದೂಗಿಸಲು ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸುವುದು, (ಆ) ಸ್ವಾವಲಂಬಿ ಮತ್ತು ವಿಕೇಂದ್ರೀಕೃತ ಆರ್ಥಿಕ ವ್ಯವಸ್ಥೆಯ ಅಭಿವೃದ್ಧಿಗೊಳಿಸುವುದು, (ಇ) ಖಾಸಗಿ ಮಧ್ಯವರ್ತಿಗಳ ಪಾತ್ರವನ್ನು ಕಡಿಮೆಗೊಳಿಸುವುದು, (ಈ) ಒಗ್ಗಟ್ಟಿನ ಬಲದಿಂದ ಸದೃಢ, ಸಮರ್ಥವ್ಯವಸ್ಥೆಯಿಂದ ಸಂಸ್ಥೆಗಳನ್ನು ಬೆಳೆಸುವುದು,(ಉ) ರಾಷ್ಟ್ರೀಯ ಆದಾಯದ ಸಮಾನ ವಿತರಣೆ ಅವಕಾಶ ಸೃಷ್ಟಿಸುವುದು.

ಆದರೆ, ಖೇದಕರ ಸಂಗತಿಯೆಂದರೆ ಸಹಕಾರಿ ಕ್ಷೇತ್ರ ಬೆಳೆದಂತೆ, ಈ ಮೂಲ ಉದ್ದೇಶಗಳು ಮಾಯಾವಾಗುತ್ತಿದ್ದು ವೃತ್ತಿಪರ ನಿರ್ವಹಣೆ ಕಡಿಮೆಯಾಗಿ ಸಂಸ್ಥೆಗಳ ಉಳಿವು ಪ್ರಶ್ನಾತೀತವಾಗಿದೆ. ಇದನ್ನು ನಾವು ನಿಭಾಯಿಸಲು ಪಂಚ ತತ್ವಗಳನ್ನು ಅಳವಡಿಸಬೇಕು.

1) **ಸ್ಪಷ್ಟತೆ (Clarity)** : ಜಾಗತೀಕರಣದ ಭರಾಟೆಯಲ್ಲಿ ಸಾಗುತ್ತಿರುವ ನಾವು ಉಳಿದು-ಬೆಳೆದು-ಅಭಿವೃದ್ಧಿಯಾಗಲು ನಮ್ಮ ಸಂಸ್ಥೆಯ ಗುರಿ-ಉದ್ದೇಶಗಳ (Corporate Goals)ಲ್ಲಿ ಸ್ಪಷ್ಟತೆ ಇದ್ದರೆ ಸಾಧನೆ ಸರಳವಾಗುತ್ತದೆ.

ಮುಂದುವರೆಯುತ್ತದೆ...



# ಸಹಕಾರಿ ಸಂಘಟನೆಗಳಲ್ಲಿ ಪರಿಣಾಮಕಾರಿ ನಾಯಕತ್ವ

▸▸ **ಯಶವಂತ ಡೋಂಗ್ರೆ,** ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾಲಯ ಮೈಸೂರು.

**"ಸಹಕಾರಿ ಸಂಸ್ಥೆಗಳ ಯಶಸ್ಸಿಗೆ ಅಗತ್ಯವಿರುವುದು ಒಬ್ಬ ದೊಡ್ಡ ನಾಯಕನಲ್ಲ, ಹಲವು ಸಣ್ಣ ನಾಯಕರು" – ವರ್ಗೀಸ್ ಕುರಿಯನ್**

ಸಹಕಾರಿ ನಾಯಕತ್ವ (ಕೋ ಆಪರೇಟಿವ್ ಲೀಡರ್ ಶಿಪ್) ಎನ್ನುವುದು ಸಾಮಾನ್ಯ ಅರ್ಥದಲ್ಲಿ ಉಪಯೋಗಿಸುವ ನಾಯಕತ್ವ (ಲೀಡರ್‌ಶಿಪ್) ಅಥವಾ ನಾಯಕ (ಲೀಡರ್) ಶಬ್ದಗಳ ವ್ಯಾಪ್ತಿಗಿಂತ ಭಿನ್ನವೂ, ವಿಸ್ತಾರವೂ ಆದ ಸಂರಚನೆಯಾಗಿದೆ. ಈ ಭಿನ್ನತೆಯೂ ಸಹಕಾರಿ ಸಂಸ್ಥೆಗಳ ವಿಶಿಷ್ಟ ಅನನ್ಯತೆ (ಯುನಿಕ್ ಐಡೆಂಟಿಟಿ)ಯ ಕಾರಣದಿಂದಾಗಿ ಸೃಷ್ಟಿಯಾಗುತ್ತದೆ. ಆದುದರಿಂದ ಸಹಕಾರಿ ಕ್ಷೇತ್ರದಲ್ಲಿನ ಪರಿಣಾಮಕಾರಿ ನಾಯಕತ್ವದ ಬಗ್ಗೆ ಅರಿವು ಮೂಡಬೇಕಾದರೆ ಸಹಕಾರಿ ಸಂಘಗಳ ಅನನ್ಯತೆ ಮೊದಲು ಅರಿವಾಗಬೇಕಾಗುತ್ತದೆ. ಆದುದರಿಂದ ಈ ಅನನ್ಯತೆಯ ಅಂಶಗಳಿಂದ ನಮ್ಮ ಚಿಂತನೆಯನ್ನು ಆರಂಭಿಸೋಣ.

**ಸಹಕಾರಿ ಸಂಸ್ಥೆಗಳ ಅನನ್ಯತೆ :** ಸಹಕಾರಿ ಸಂಘಟನೆಗಳು ಕೇವಲ ತಾಂತ್ರಿಕವಾಗಿ ರಚಿಸಲ್ಪಟ್ಟು, ಸಹಕಾರಿ ಕಾಯಿದೆಯಡಿಯಲ್ಲಿ ನೋಂದಾಯಿ ಸಲ್ಪಡುವುದರಿಂದ ತಮ್ಮ ವಿಶಿಷ್ಟತೆಯನ್ನು ಪಡೆಯು ವುದಿಲ್ಲ. ಬದಲಿಗೆ, ನಿರ್ದಿಷ್ಟ ಗುಣಲಕ್ಷಣಗಳನ್ನು ಹೊಂದಿದ್ದಲ್ಲಿ ಮಾತ್ರವೇ ನಿಜವಾದ ಸಹಕಾರಿ ಸಂಸ್ಥೆಗಳಾಗುತ್ತದೆ. ಇಂತಹ ಗುಣಲಕ್ಷಣಗಳನ್ನು ಮೊದಲಾಗಿ ಗಮನಿಸೋಣ.



(ಅ) ಸಹಕಾರಿ ಸಂಸ್ಥೆಗಳು ಸದಸ್ಯ ಕೇಂದ್ರಿತ (ಮೆಂಬರ್ ಸೆಂಟರ್ಡ್) ಮತ್ತು ಸದಸ್ಯ ನಿರ್ದೇಶಿತ (ಮೆಂಬರ್ ಡೈರೆಕ್ಟೆಡ್) ಸಂಸ್ಥೆಗಳು ಎಲ್ಲ ಸಂದರ್ಭದಲ್ಲೂ ಸದಸ್ಯರ ಒಳಿತಿಗಾಗಿ ಕಾರ್ಯ ನಡೆಸುವುದು ಸಹಕಾರಿ ಸಂಸ್ಥೆಗಳ ಕರ್ತವ್ಯ. ಸದಸ್ಯರು ಸಕ್ರಿಯವಾಗಿರದ ಸಂಸ್ಥೆಗಳನ್ನು ಸಹಕಾರಿ ಸಂಸ್ಥೆಗಳೆಂದು ಗುರುತಿಸಲಾಗದು. ಕೆಲವೇ ಸದಸ್ಯರು ಅಥವಾ ನಾಯಕರು ದೀರ್ಘಕಾಲ ಸಂಸ್ಥೆಯನ್ನು ಮುನ್ನಡೆಸುತ್ತಿದ್ದು, ಸಂಸ್ಥೆಯ ಮೇಲೆ ನಿಯಂತ್ರಣ ಹೊಂದಿದ್ದರೆ ಆ ಸಂಸ್ಥೆ ತನ್ನ ಸಹಕಾರಿ ಅನನ್ಯತೆಯನ್ನು ಕಳೆದುಕೊಳ್ಳುತ್ತದೆ.

(ಆ) ಸಹಕಾರಿ ಸಂಸ್ಥೆಗಳ ಸದಸ್ಯರ ಅಗತ್ಯಗಳನ್ನು (ಮೆಂಬರ್ ನೀಡ್ಸ್) ಸಂಸ್ಥೆಯ ವ್ಯವಹಾರವನ್ನಾಗಿ ಪರಿವರ್ತಿಸುವ ಸಂಸ್ಥೆಗಳೆ ಹೊರತು ಮಾರುಕಟ್ಟೆಯ ಬೇಡಿಕೆಯನ್ನು (ಮಾರ್ಕೆಟ್ ಡಿಮ್ಯಾಂಡ್) ಆಧರಿಸಿ ವ್ಯವಹಾರ ಸಂಘಟಿಸುವ ಸಂಸ್ಥೆಗಳಲ್ಲ. ಮಾರುಕಟ್ಟೆಯ ಬೇಡಿಕೆಯ ಆಧಾರದಲ್ಲಿ ವ್ಯವಹಾರಕ್ಕೆ ತೊಡಗಿದಂತೆಲ್ಲ, ಸದಸ್ಯರ ಅಗತ್ಯಗಳಿಂದ ದೂರವಾಗುವ ಸಾಧ್ಯತೆ ಇರುತ್ತದೆ ಮತ್ತು ಸದಸ್ಯರಲ್ಲದವರ ಬೇಡಿಕೆಗಳ ಪೂರೈಕೆಯೆಡೆಗೆ ಗಮನಹರಿಸಬೇಕಾಗುತ್ತದೆ. ಈ ರೀತಿಯ ವ್ಯವಹಾರದಿಂದಾಗಿ ಸಂಸ್ಥೆಯ ಲಾಭ ಹೆಚ್ಚಾಗಬಹುದು. ಆದರೆ, ಸಹಕಾರಿಯ ಅನನ್ಯತೆ ಕಳೆದು ಹೋಗುತ್ತಾ ಖಾಸಗಿ ವ್ಯವಹಾರ ಸಂಸ್ಥೆಯ ಗುಣಲಕ್ಷಣಗಳು ಆವರಿಸುತ್ತವೆ.

(ಇ) ಸಹಕಾರಿ ಸಂಸ್ಥೆಗಳು, ಸಂಸ್ಥೆಯ ಸೇವೆಗಳನ್ನು ಹೆಚ್ಚು ಹೆಚ್ಚು ಉಪಯೋಗಿಸುವ ಸದಸ್ಯರಿಗೆ ಹೆಚ್ಚಿನ ಲಾಭ ದೊರೆಯುವಂತೆ ನೋಡಿಕೊಳ್ಳಬೇಕಾದ ಸಂಸ್ಥೆಗಳು. ಅಂದರೆ, ಹೂಡಿಕೆ ಮಾಡಿದ ಬಂಡವಾಳದ ಆಧಾರದಲ್ಲಿ ಹೆಚ್ಚಿನ ಲಾಭಾಂಶ ನೀಡುವ ಸಂಸ್ಥೆಗಳಾಗಿರದೆ, ಸಂಸ್ಥೆಯ ಸೇವೆ/ ಸರಕುಗಳನ್ನು ಹೆಚ್ಚಾಗಿ ಪಡೆಯುವ ಸದಸ್ಯರಿಗೆ ಹೆಚ್ಚಿನ ಲಾಭಾಂಶ ನೀಡಬೇಕಾದ ಸಂಸ್ಥೆಗಳು.

(ಈ) ಸಹಕಾರಿ ಸಂಸ್ಥೆಗಳು ಪ್ರಜಾ ಸಮಾಜದ (ಸಿವಿಲ್ ಸೊಸೈಟಿ) ಅಂಗ ಸಂಸ್ಥೆಗಳು. ಒಂದು ನಿರ್ದಿಷ್ಟ ಜನಸಮೂಹವು ತನ್ನ ಅಗತ್ಯಗಳಿಗಾಗಿ ತಾನೇ ರಚಿಸಿಕೊಂಡ ಆಂತರಿಕ ಒಳನೋಟದ (ಇನ್‌ವರ್ಡ್ ಲುಕಿಂಗ್) ಸಂಸ್ಥೆಗಳು. ಆದುದರಿಂದ ಪ್ರಜಾಸತ್ತಾತ್ಮಕ ನೆಲೆಯಲ್ಲಿ, ಸದಸ್ಯರ ಸಕ್ರಿಯ ಭಾಗವಹಿಸುವಿಕೆಯ ಆಧಾರದಲ್ಲಿ ಉತ್ತಮ ಸಾಂಸ್ಥಿಕಧರ್ಮ ಪಾಲನೆ ಮಾಡಬೇಕಾದ (ಗುಡ್ ಗವರ್ನೆನ್ಸ್) ಸಂಸ್ಥೆಗಳು. ಆದುದರಿಂದ ನಿರ್ಧಾರಗಳಲ್ಲಿ ಪಾರದರ್ಶಕತೆ (ಟ್ರಾನ್ಸ್‌ಪರೆನ್ಸಿ), ಪರಿಣಾಮಗಳಿಗೆ ಉತ್ತರದಾಯಿತ್ವ (ಅಕೌಂಟೆಬಿಲಿಟಿ), ಎಲ್ಲರ ಭಾಗವಹಿಸುವಿಕೆಗೆ ಅವಕಾಶ (ಪಾರ್ಟಿಸಿಪೇಶನ್) ಮತ್ತು ಕಾನೂನಿನ ಪರಿವಿಧಿಗಳಿಗೆ ಬದ್ಧತೆ (ರೂಲ್ ಆಫ್ ಲಾ) ಇವುಗಳು ಯಾವುದೇ ಸಹಕಾರಿ ಸಂಸ್ಥೆಯಲ್ಲಿ ಇರಲೇಬೇಕಾದ ಗುಣಗಳು.

(ಉ) ವ್ಯವಹಾರ ಕ್ಷೇತ್ರದಲ್ಲಿ ಸಹಕಾರಿ ಸಂಸ್ಥೆಗಳು ನಿರ್ವಹಿಸಬೇಕಾದ ಪ್ರಾಥಮಿಕ ಪಾತ್ರ. ರಚನಾತ್ಮಕ ಸ್ಪರ್ಧಿಗಳ

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Bengaluru Post Office 560001,
Posting Day 8th. Registered No. RNP/BGW/1744/2014-16.
RNI No. KARBIL - 2004/18001. Pages 20

ರೂಪದಲ್ಲಿರಬೇಕು (ಕನ್ಸ್‌ಟ್ರಕ್ಟಿವ್ ಕಾಂಪಿಟೀಟರ್), ಅಂದರೆ, ಸಹಕಾರಿ ಸಂಸ್ಥೆಗಳು ಯಾವುದೇ ಕ್ಷೇತ್ರದಲ್ಲಿ ಏಕಸ್ವಾಮ್ಯವನ್ನು, ಮಾರುಕಟ್ಟೆ ಪೂರ್ಣ ನಿಯಂತ್ರಣವನ್ನು ಹೊಂದಿರಬೇಕಾದ ಸಂಸ್ಥೆಗಳಲ್ಲ. ಬದಲಿಗೆ, ತಮ್ಮ ಅಸ್ತಿತ್ವದಿಂದಾಗಿ ಖಾಸಗಿ ಮತ್ತು ಸಹಕಾರಿ ವ್ಯವಹಾರ ಸಂಘಟನೆಗಳ ಕಾರ್ಯನುಷ್ಠಾನದ ಮೇಲೆ ನಿರಂತರ ಪ್ರಭಾವ ಬೀರಬೇಕಾದ ಸಂಸ್ಥೆಗಳು. ಉತ್ತಮ ಮತ್ತು ಪರಿಣಾಮಕಾರಿ ನಾಯಕತ್ವವು ಸಹಕಾರಿ ಸಂಸ್ಥೆಗಳ ಈ ಅನನ್ಯತೆಯನ್ನು ಅರಿತು ನಡೆಯುವ ನಾಯಕತ್ವವಾಗಿರಬೇಕು.

**ಸಹಕಾರಿ ನಾಯಕತ್ವದ ಗುಣಲಕ್ಷಣಗಳು :** ಪರಿಣಾಮಕಾರಿ ಸಹಕಾರಿ ನಾಯಕತ್ವವು ಹಲವು ಅಂಶಗಳ ಸಂಗಮವಾಗಿದೆ. ಕಾಲದಿಂದ ಕಾಲಕ್ಕೆ ಈ ಅಂಶಗಳಲ್ಲಿ ಬದಲಾವಣೆಯಾಗುವುದು ಸಾಧ್ಯವಾದರೂ, ಎಲ್ಲ ಕಾಲಕ್ಕೂ ಸಲ್ಲುವ ಹಲವು ಅಂಶಗಳೂ ಇವೆ. ಅಂತಹ ಮುಖ್ಯ ಅಂಶಗಳನ್ನು ಗಮನಿಸೋಣ.

ಮುಂದಿನ ಸಂಚಿಕೆಗೆ...

# ಗೋವಾದಲ್ಲಿ ಪತ್ತಿನ ಸಹಕಾರ ಸಂಘಗಳ ಅಧಿವೇಶನ 1,2, ನವೆಂಬರ್ – 2014

ಸಹಕಾರ ಭಾರತಿ ಆಶ್ರಯದಲ್ಲಿ ಅಖಿಲ ಭಾರತ ಮಟ್ಟದ ಪತ್ತಿನ (Credit Society's) ಸಹಕಾರಿಗಳ ರಾಷ್ಟ್ರೀಯ ಮಟ್ಟದ ಪ್ರಥಮ ಅಧಿವೇಶನವು ನವೆಂಬರ್ 1 ಮತ್ತು 2 ರಂದು ಗೋವಾ ರಾಜ್ಯದ ಪಣಜಿಯಲ್ಲಿ ಜರುಗಲಿದೆ ಎಂದು ಸಹಕಾರ ಭಾರತೀಯ ಕರ್ನಾಟಕ ಪತ್ತಿನ ಸಹಕಾರ ಸಂಘಗಳ ವಿಭಾಗದ ಮುಖ್ಯಸ್ಥರಾದ ಶ್ರೀ ಬಿ ರಾಜಶೇಖರ ತಿಳಿಸಿದ್ದಾರೆ.

ಪತ್ತಿನ ಸಹಕಾರಿಗಳು ಎದುರಿಸುತ್ತಿರುವ ಅನೇಕ ಜ್ವಲಂತ ಸಮಸ್ಯೆಗಳನ್ನು ಅಧಿವೇಶನದಲ್ಲಿ ಚರ್ಚಿಸಲು ನಿರ್ಧರಿಸಲಾಗಿದೆ. ಸಹಕಾರ ಭಾರತೀಯು ಸದರಿ ಅಧಿವೇಶನವನ್ನು ಸದ್ಬಳಕೆ ಮಾಡಿಕೊಳ್ಳುವ ಉದ್ದೇಶದಿಂದ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ಸಹಕಾರಿ ಧುರೀಣರನ್ನು ಆಹ್ವಾನಿಸಿ ಪ್ರಮುಖವಾದ ಗೋಷ್ಠಿಗಳನ್ನು ನಡೆಸಲು ಉದ್ದೇಶಿಸಲಾಗಿದೆ.

ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವ ಪತ್ತಿನ ಸಹಕಾರ ಸಂಘಗಳ ಬಗ್ಗೆ ಚರ್ಚೆಗಳು ನಡೆಯಲಿದೆ. ವಿಶೇಷವಾಗಿ ಸಹಕಾರ ಸಂಘಗಳಲ್ಲಿ ಸದಸ್ಯರು ತೊಡಗಿಸುವ ಠೇವಣಿಗಳಿಗೆ ವಿಮಾ ಭದ್ರತೆಯ ಬಗ್ಗೆ, ಆದಾಯ ತೆರಿಗೆ ಇಲಾಖೆಯ ಅನೇಕ ಗೊಂದಲುಗಳು ಹಾಗೂ ಆದಾಯ ತೆರಿಗೆ ಸೇಕ್ಷನ್ 80 ಪಿ ಹಾಗೂ ಸೆಕ್ಷನ್ 269 ಎಸ್ ಎಸ್ ಬಗ್ಗೆಯು ಚರ್ಚೆಗಳು ನಡೆಯಲಿವೆ.

ಪತ್ತಿನ ಸಹಕಾರಿಗಳು ಸಹಕಾರಿಯ ಉದ್ದೇಶಕ್ಕಾಗಿ ಸ್ಥಿರಾಸ್ಥಿ ಖರೀದಿಸುವ ಸಂದರ್ಭದಲ್ಲಿ ಶುಲ್ಕ ವಿನಾಯಿತಿಗೆ ಕೋರಲು ಯೋಚಿಸಲಾಗುತ್ತಿದೆ. ಪತ್ತಿನ ಸಹಕಾರಿಗಳು ಬ್ಯಾಂಕ್‌ಗಳಾಗಿ ಪರಿವರ್ತಿಸಲು ಪ್ರಯತ್ನಿಸುತ್ತಿದ್ದರು ಕಳೆದ 15 ವರ್ಷಗಳಿಂದ ಭಾರತೀಯ ರಿಜರ್ವ್ ಬ್ಯಾಂಕ್ ಅವಕಾಶ ನೀಡದೆ ಇರುವುದರು ಬಗ್ಗೆಯು ಚರ್ಚೆಗಳು ನಡೆಯಲಿದೆ. ಅನೇಕ ರಾಜ್ಯಗಳಲ್ಲಿ ಸಹಕಾರಿಗಳ ಕಾಯ್ದೆಗಳಲ್ಲಿರುವ ಗೊಂದಲವನ್ನು ನಿವಾರಿಸುವ ಬಗ್ಗೆಯು ಚರ್ಚೆಗಳು ನಡೆಯಲಿದೆ.

ಅಧಿವೇಶನದಲ್ಲಿ ಕೇಂದ್ರದ ಅರ್ಥಸಚಿವರು, ಆರ್ಥಿಕ ಇಲಾಖೆಯ ಅನೇಕ ಅಧಿಕಾರಿಗಳು, ಕೇಂದ್ರದ ಕೃಷಿ ಸಚಿವರು, (Central Direct Tax Board) ಕೇಂದ್ರ ನೇರ ತೆರಿಗೆ ಮಂಡಳಿ ಅಧ್ಯಕ್ಷರು, ಭಾರತೀಯ ರಿಜರ್ವ ಬ್ಯಾಂಕ್ ಅಧಿಕಾರಿಗಳು, (International Co-operative Alliance) ಅಂತರಾಷ್ಟ್ರಿಯ ಸಹಕಾರಿಗಳ ಪ್ರತಿನಿಧಿಗಳು ಎಲ್ಲಾ ರಾಜ್ಯಗಳ ಸಹಕಾರ ಸಚಿವರುಗಳನ್ನು ಅಧಿವೇಶನಕ್ಕೆ ಆಹ್ವಾನಿಸಲಾಗುತ್ತಿದೆ. ಅಧಿವೇಶನದಲ್ಲಿ ಭಾಗವಹಿಸಲು ಅಪೇಕ್ಷಿಸುವ ಸಹಕಾರ ಸಂಘಗಳ ಪದಾಧಿಕಾರಿಗಳು ಸೆಪ್ಟೆಂಬರ್ 30ರ ಒಳಗಾಗಿ ರೂ. 1,200.00 ಶುಲ್ಕವನ್ನು ಪಾವತಿಸುವ ಮೂಲಕ ಸಹಕಾರ ಭಾರತಿಯಲ್ಲಿ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು. ■

**ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ವಿಭಾಗೀಯ ಕಛೇರಿ #436, ಮೊದಲನೆಯ ಮಹಡಿ, ಹುಯಿಲಗೋಳ ಕಟ್ಟಡ ಶನಿ ಮಂದಿರ ಹತ್ತಿರ, ಪಾಟೀಲ ಗಲ್ಲಿ, ಬೆಳಗಾವಿ–590001 ದೂ.ಸಂ : 0831–2401551.

**ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ :** ಗುಲ್ಬರ್ಗಾ ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ – 585102. ದೂ. 08472–270222.

Edited, Printed and Published by Sharangouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010